# ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ

# ಕೋಲಾರ ಜಿಲ್ಲೆ ಕೋಲಾರ

## "ನನ್ನನ್ನೊಮ್ಮೆ ಗಮನಿಸಿ"

## ಪ್ರಶ್ನೋತ್ತರ ಕೋಠಿ

(ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರಶ್ನೆ ಪತ್ರಿಕೆಯ ವಿನ್ಯಾಸದಂತೆ)

**10ನೇ ತರಗತಿ** **ಶೈಕ್ಷಣಿಕ ವರ್ಷ 2021–22** **ಪ್ರಥಮ ಭಾಷೆ ಕನ್ನಡ**

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಕ್ರಮಾಕ್ಷರದೊಂದಿಗೆ ಬರೆಯಿರಿ:**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ.

ಎ) 34 ಬಿ) 25 ಸಿ) 49 ಡಿ) 51

**ಉತ್ತರ : ಸಿ) 49**

2. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳ ಸಂಖ್ಯೆ.

ಎ) 7 ಬಿ) 6 ಸಿ) 8 ಡಿ) 5

**ಉತ್ತರ : ಬಿ) 6**

3. 'ಅರಮನೆ' ಪದದಲ್ಲಿರುವ ಅವರ್ಗೀಯ ವ್ಯಂಜನ.

ಎ) ಅ ಬಿ) ರ ಸಿ) ಮ ಡಿ) ನೆ

**ಉತ್ತರ : ಬಿ) ರ**

4. ಙ, ಞ, ನ, ಣ, ಮ – ಕನ್ನಡ ವರ್ಣಮಾಲೆಯ ಈ ಅಕ್ಷರಗಳು.

ಎ) ಸ್ವರಗಳು ಬಿ) ಅಲ್ಪಪ್ರಾಣಗಳು ಸಿ) ಅನುನಾಸಿಕಗಳು ಡಿ) ಯೋಗವಾಹಗಳು

**ಉತ್ತರ : ಸಿ) ಅನುನಾಸಿಕಗಳು**

5. ಅನ್ವರ್ಥ ನಾಮಪದಕ್ಕೆ ಉದಾಹರಣೆ ಪದವಿದು.

ಎ) ಕಮಲಾಕ್ಷ ಬಿ) ವ್ಯಾಪಾರಿ ಸಿ) ಪರ್ವತ ಡಿ) ಚಿಕ್ಕದು

**ಉತ್ತರ : ಬಿ) ವ್ಯಾಪಾರಿ**

6. 'ಮೂಡಣ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಸಂಖ್ಯಾವಾಚಕ ಬಿ) ಪರಿಮಾಣವಾಚಕ ಸಿ) ದಿಗ್ವಾಚಕ ಡಿ) ಸಂಖ್ಯೇಯವಾಚಕ

**ಉತ್ತರ : ಸಿ) ದಿಗ್ವಾಚಕ**

7. ಉತ್ತಮ ಪುರುಷ ಸರ್ವನಾಮ ಪದಕ್ಕೆ ಉದಾಹರಣೆಗಳು ಇವು.

ಎ) ತಾವು, ತಾನು ಬಿ) ಅವನು, ಇವನು ಸಿ) ನಾನು, ನಾವು ಡಿ) ಯಾರು, ಏನು

**ಉತ್ತರ : ಸಿ) ನಾನು, ನಾವು**

8. ನೀನು, ನೀವು – ಈ ಸರ್ವನಾಮಗಳು.

ಎ) ಉತ್ತಮ ಪುರುಷ ಬಿ) ಮಧ್ಯಮ ಪುರುಷ ಸಿ) ಪ್ರಥಮ ಪುರುಷ ಡಿ) ಆತ್ಮಾರ್ಥಕ

**ಉತ್ತರ : ಬಿ) ಮಧ್ಯಮ ಪುರುಷ**

9. ಸಪ್ತಮಿ ವಿಭಕ್ತಿಯ ಕಾರಕಾರ್ಥವಿದು.

ಎ) ಸಂಪ್ರಧಾನ ಬಿ) ಅಪಾದಾನ ಸಿ) ಅಧಿಕರಣ ಡಿ) ಕರ್ಮಾರ್ಥ

**ಉತ್ತರ : ಸಿ) ಅಧಿಕರಣ**

ಉಪನಿರ್ದೇಶಕರ ಕಛೇರಿ ಕೋಲಾರ

10. 'ಮರದಿಂ' ಪದದಲ್ಲಿರುವ ವಿಭಕ್ತಿ.

ಎ) ದ್ವಿತೀಯ ಬಿ) ತೃತೀಯ ಸಿ) ಚತುರ್ಥಿ ಡಿ) ಪಂಚಮಿ

**ಉತ್ತರ : ಬಿ) ತೃತೀಯ**

11. 'ಬಿರುಗಾಳಿಗೆ ಮರಗಳೆಲ್ಲವೂ ರಸ್ತೆಯ ಮೇಲೆ ಬಿದ್ದಿವೆ' ಈ ವಾಕ್ಯದಲ್ಲಿರುವ ಬಿರುಗಾಳಿಗೆ ಪದವು ಈ ವಿಭಕ್ತಿಯಲ್ಲಿದೆ.

ಎ) ಪ್ರಥಮ ಬಿ) ದ್ವಿತೀಯ ಸಿ) ಚತುರ್ಥಿ ಡಿ) ಷಷ್ಠಿ

**ಉತ್ತರ : ಸಿ) ಚತುರ್ಥಿ**

12. ಪಂಚಮಿ ವಿಭಕ್ತಿಯ ಹೊಸಗನ್ನಡ ಪ್ರತ್ಯಯವಿದು

ಎ) ದೆಸೆಯಿಂದ ಬಿ) ಇಂದ ಸಿ) ಅತ್ತಣಿಂ ಡಿ) ಅ

**ಉತ್ತರ : ಎ) ದೆಸೆಯಿಂದ**

13. ಕ್ರಿಯಾಪದದ ಮೂಲರೂಪವನ್ನು ಹೀಗೆನ್ನುವರು

ಎ) ತದ್ದಿತಾಂತ ಬಿ) ಕೃದಂತ ಸಿ) ಧಾತು ಡಿ) ಅವ್ಯಯ

**ಉತ್ತರ : ಸಿ) ಧಾತು**

14. ಇವುಗಳಲ್ಲಿ ಆಕರ್ಮಕ ಧಾತು

ಎ) ಕೊಡು ಬಿ) ತಿನ್ನು ಸಿ) ಉಣ್ಣು ಡಿ) ಮಲಗು

**ಉತ್ತರ : ಡಿ) ಮಲಗು**

15. ಮಾಡಲಿ ಪದವು ಈ ಕ್ರಿಯರೂಪಕ್ಕೆ ಉದಾಹರಣೆಯಾಗಿದೆ

ಎ) ನಿಷೇಧಾರ್ಥಕ ಬಿ) ವಿದ್ಯರ್ಥಕ ಸಿ) ಕರ್ತರಿ ಡಿ) ಸಂಭವನಾರ್ಥಕ

**ಉತ್ತರ : ಬಿ) ವಿದ್ಯರ್ಥಕ**

16. ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾರೂಪಕ್ಕೆ ಉದಹರಣೆ

ಎ) ಮಾಡಲಿ ಬಿ) ಮಾಡನು ಸಿ) ಮಾಡಿಯಾರು ಡಿ) ಮಾಡೇವು

**ಉತ್ತರ : ಬಿ) ಮಾಡನು**

17. ಕ್ರಿಯೆಯಲ್ಲಿ ಸಂಶಯವನ್ನು ವ್ಯಕ್ತಪಡಿಸುವ ಕ್ರಿಯಾರೂಪಗಳು

ಎ) ನಿಷೇಧಾರ್ಥಕ ಬಿ) ವಿದ್ಯರ್ಥಕ ಸಿ) ನಾನಾರ್ಥಕ ಡಿ) ಸಂಭವನಾರ್ಥಕ

**ಉತ್ತರ : ಡಿ) ಸಂಭವನಾರ್ಥಕ**

18. ಊರೂರು ಪದವು ಈ ಸಂಧಿಗೆ ಉದಾಹಣೆಯಾಗಿದೆ.

ಎ) ಲೋಪ ಬಿ) ಆಗಮ ಸಿ) ಆದೇಶ ಡಿ) ಗುಣ

**ಉತ್ತರ : ಎ) ಲೋಪ**

19. 'ಜಾತ್ಯತೀತ' ಪದವು ಈ ಸಂಧಿಗೆ ಉದಾಹಣೆಯಾಗಿದೆ.

ಎ) ಯಣ್ ಸಂಧಿ ಬಿ) ವೃದ್ಧಿ ಸಂಧಿ ಸಿ) ಜಶ್ತ್ವ ಸಂಧಿ ಡಿ) ಶ್ಚುತ್ವ ಸಂಧಿ

**ಉತ್ತರ : ಎ) ಯಣ್ ಸಂಧಿ**

20. ಇವುಗಳಲ್ಲಿ ಅನುನಾಸಿಕ ಸಂಧಿಗೆ ಉದಾಹರಣೆ ಪದವಿದು

ಎ) ಜನೈಕ್ಯ ಬಿ) ಆಜಂತ ಸಿ) ತನ್ಮಯ ಡಿ) ಗಿರೀಶ

**ಉತ್ತರ : ಸಿ) ತನ್ಮಯ**

21. 'ಶರಚ್ಚಂದ' ಪದವು ಈ ಸಂಧಿಗೆ ಉದಾಹಣೆಯಾಗಿದೆ.

ಎ) ವೃದ್ಧಿ ಸಂಧಿ ಬಿ) ಶ್ಚುತ್ವ ಸಂಧಿ ಸಿ) ಜಶ್ತ್ವ ಸಂಧಿ ಡಿ) ಗುಣ

**ಉತ್ತರ : ಬಿ) ಶ್ಚುತ್ವ ಸಂಧಿ**

22. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ದ್ವಿಗು ಬಿ) ಅಂಶಿ ಸಿ) ಕ್ರಿಯಾ ಡಿ) ತತ್ಪುರುಷ

**ಉತ್ತರ : ಡಿ) ತತ್ಪುರುಷ**

23. ಇವುಗಳಲ್ಲಿ ದ್ವಿಗು ಸಮಾಸಕ್ಕೆ ಉದಾಹರಣೆ ಪದವಿದು.

ಎ) ಅಂಗೈ ಬಿ) ಮೂಗಾವುದ ಸಿ) ಕಣ್ದೆರೆ ಡಿ) ಇಮ್ಮಾವು

**ಉತ್ತರ : ಬಿ) ಮೂಗಾವುದ**

24. 'ಚಕ್ರಪಾಣಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಕರ್ಮಧಾರಯ　　ಬಿ) ತತ್ಪುರುಷ　　ಸಿ) ಬಹುವ್ರೀಹಿ　　ಡಿ) ದ್ವಂದ್ವ

**ಉತ್ತರ : ಸಿ) ಬಹುವ್ರೀಹಿ**

25. ಇವುಗಳಲ್ಲಿ ಗಮಕ ಸಮಾಸಕ್ಕೆ ಉದಾಹರಣೆ ಪದವಿದು.

ಎ) ನೇಯ್ದವಸ್ತ್ರ　　ಬಿ) ಮುಕ್ಕಣ್ಣ　　ಸಿ) ಹಿಂದಲೆ　　ಡಿ) ಮೆಲ್ವಾತು

**ಉತ್ತರ : ಎ) ನೇಯ್ದವಸ್ತ್ರ**

26. 'ತಂಬಾಕು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

ಎ) ಅರಬ್ಬೀ　　ಬಿ) ಉರ್ದು　　ಸಿ) ಪೋರ್ಚುಗೀಸ್　　ಡಿ) ಫಾರ್ಸಿ

**ಉತ್ತರ : ಸಿ) ಪೋರ್ಚುಗೀಸ್**

27. ಇವುಗಳಲ್ಲಿ ಅರಬ್ಬೀ ಭಾಷೆಯಿಂದ ಕನ್ನಡಕ್ಕೆ ಬಂದ ಪದ.

ಎ) ದೀನಾರ　　ಬಿ) ಇನಾಮು　　ಸಿ) ಕಾರು　　ಡಿ) ರಸ್ತೆ

**ಉತ್ತರ : ಬಿ) ಇನಾಮು**

28. 'ಅರ್ಜಿ 'ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

ಎ) ಇಂಗ್ಲೀಷ್　　ಬಿ) ಹಿಂದೂಸ್ತಾನಿ　　ಸಿ) ಉರ್ದು　　ಡಿ) ಗ್ರೀಕ್

**ಉತ್ತರ : ಬಿ) ಹಿಂದೂಸ್ತಾನಿ**

29. ಇವುಗಳಲ್ಲಿ ಗ್ರೀಕ್ ಮತ್ತು ರೋಮನ್ ಭಾಷೆಗಳಿಂದ ಕನ್ನಡಕ್ಕೆ ಬಂದ ಪದ.

ಎ) ದಮ್ಮಡಿ　　ಬಿ) ಕಾಲೇಜು　　ಸಿ) ಚೌಕಾಷಿ　　ಡಿ) ಬಸ್ಸು

**ಉತ್ತರ : ಎ) ದಮ್ಮಡಿ**

30. ನಾಮಪದ ಕ್ರಿಯಾಪದಗಳಂತೆ ಲಿಂಗ ವಚನ ವಿಭಕ್ತಿಗಳಿಂದ ರೂಪಬೇಧವನ್ನು ಹೊಂದದೆ ಏಕರೂಪವಾಗಿರುವ ಪದಗಳು.

ಎ) ಪ್ರತ್ಯಯಗಳು　　ಬಿ) ಅವ್ಯಯಗಳು　　ಸಿ) ವಿಭಕ್ತಿಗಳು　　ಡಿ) ಸರ್ವನಾಮಗಳು

**ಉತ್ತರ : ಬಿ) ಅವ್ಯಯಗಳು**

31. ಸಾಮಾನ್ಯಾರ್ಥಕಾವ್ಯಯಕ್ಕೆ ಉದಾಹರಣೆ ಪದವಿದು.

ಎ) ಸಾಕು　　ಬಿ) ಚೆನ್ನಾಗಿ　　ಸಿ) ಅಥವಾ　　ಡಿ) ಅವನೇ

**ಉತ್ತರ : ಬಿ) ಚೆನ್ನಾಗಿ**

32. ಆಹಾ! ಅಯ್ಯೋ! ಅಬ್ಬಾ! ಮುಂತಾದ ಅವ್ಯಯಗಳು ಈ ವಿಧಕ್ಕೆ ಸೇರುತ್ತವೆ.

ಎ) ಸಾಮಾನ್ಯಾರ್ಥಕ　　ಬಿ) ಕ್ರಿಯಾರ್ಥಕ　　ಸಿ) ಅವಧಾರಣಾರ್ಥಕ　　ಡಿ) ಭಾವಸೂಚಕ

**ಉತ್ತರ : ಡಿ) ಭಾವಸೂಚಕ**

33. ಅದುವೇ ನನ್ನ ಪುಸ್ತಕ – ಈ ವಾಕ್ಯದಲ್ಲಿ ಪ್ರಯೋಗವಾಗಿರುವ ಅವ್ಯಯ.

ಎ) ಸಂಬಂದಾರ್ಥಕ　　ಬಿ) ಅವಧಾರಣಾರ್ಥಕ　　ಸಿ) ಸಾಮಾನ್ಯಾರ್ಥಕ　　ಡಿ) ಕ್ರಿಯಾರ್ಥಕ

**ಉತ್ತರ : ಬಿ) ಅವಧಾರಣಾರ್ಥಕ**

34. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ.

ಎ) ಮಿಶ್ರವಾಕ್ಯ　　ಬಿ) ಸಾಮಾನ್ಯವಾಕ್ಯ　　ಸಿ) ಸಂಯೋಜಿತವಾಕ್ಯ　　ಡಿ) ವಿಶೇಷವಾಕ್ಯ

**ಉತ್ತರ : ಬಿ) ಸಾಮಾನ್ಯವಾಕ್ಯ**

35. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು. – ಈ ವಾಕ್ಯವು

ಎ) ಸಂಯೋಜಿತವಾಕ್ಯ　　ಬಿ) ಪ್ರಶ್ನಾರ್ಥಕವಾಕ್ಯ　　ಸಿ) ಸಾಮಾನ್ಯವಾಕ್ಯ　　ಡಿ) ಮಿಶ್ರವಾಕ್ಯ

**ಉತ್ತರ : ಸಿ) ಸಾಮಾನ್ಯವಾಕ್ಯ**

36. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು.

ಎ) ಮಿಶ್ರವಾಕ್ಯ　　ಬಿ) ಸಾಮಾನ್ಯವಾಕ್ಯ　　ಸಿ) ಸಂಯೋಜಿತವಾಕ್ಯ　　ಡಿ) ವಿಶೇಷವಾಕ್ಯ

**ಉತ್ತರ : ಎ) ಮಿಶ್ರವಾಕ್ಯ**

37. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ ರವರು ಮಲೇರಿಯಾದಿಂದ ಬಳಲಿದರು. – ಈ ವಾಕ್ಯವು

ಎ) ಸಂಯೋಜಿತವಾಕ್ಯ　　ಬಿ) ಪ್ರಶ್ನಾರ್ಥಕವಾಕ್ಯ　　ಸಿ) ಸಾಮಾನ್ಯವಾಕ್ಯ　　ಡಿ) ಮಿಶ್ರವಾಕ್ಯ

**ಉತ್ತರ : ಎ) ಸಂಯೋಜಿತವಾಕ್ಯ**

38. ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ.

ಎ) ಆವರಣ ಬಿ) ಉದ್ಧರಣ ಸಿ) ವಾಕ್ಯವೇಷ್ಟನ ಡಿ) ಅಲ್ಪವಿರಾಮ

**ಉತ್ತರ : ಬಿ) ಉದ್ಧರಣ**

39. ಕನ್ನಡ ಭಾಷೆಯಲ್ಲಿ 'ಪರ್ಷಿಯನ್' ಪದಗಳನ್ನು ಬಳಸಲಾಗುತ್ತದೆ – ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ.

ಎ) ವಾಕ್ಯವೇಷ್ಟನ ಬಿ) ಅಲ್ಪವಿರಾಮ ಸಿ) ಭಾವಸೂಚಕ ಡಿ) ಅರ್ಧವಿರಾಮ

**ಉತ್ತರ : ಎ) ವಾಕ್ಯವೇಷ್ಟನ**

40. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಚಿಹ್ನೆ

ಎ) ವಿವರಣಾತ್ಮಕ ಬಿ) ಆವರಣ ಸಿ) ಉದ್ಧರಣ ಡಿ) ಪ್ರಶ್ನಾರ್ಥಕ

**ಉತ್ತರ : ಬಿ) ಆವರಣ**

41. ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ. – ಇಲ್ಲಿ ಬಳಕೆಯಾಗಬೇಕಾದ ಲೇಖನ ಚಿಹ್ನೆ.

ಎ) ವಾಕ್ಯವೇಷ್ಟನ ಬಿ) ಅರ್ಧವಿರಾಮ ಸಿ) ಉದ್ಧರಣ ಡಿ) ಅಲ್ಪವಿರಾಮ

**ಉತ್ತರ : ಬಿ) ಅರ್ಧವಿರಾಮ**

42. ಇವುಗಳಲ್ಲಿ ತದ್ಧಿತಾಂತ ನಾಮ ಪದವಿದು.

ಎ) ಚೆಲುವಿಕೆ ಬಿ) ಮೋಸಗಾರ ಸಿ) ಕಪ್ಪು ಡಿ) ಚಂದ್ರನಂತೆ

**ಉತ್ತರ : ಬಿ) ಮೋಸಗಾರ**

43. 'ಜಾಣತನ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.

ಎ) ತದ್ಧಿತಾಂತಾವ್ಯಯ ಬಿ) ತದ್ಧಿತಾಂತನಾಮ ಸಿ) ತದ್ಧಿತಾಂತಭಾವನಾಮ ಡಿ) ಕೃದಂತನಾಮ

**ಉತ್ತರ : ಸಿ) ತದ್ಧಿತಾಂತಭಾವನಾಮ**

44. ಇವುಗಳಲ್ಲಿ ತದ್ಧಿತಾಂತಾವ್ಯಯ ಪದವಿದು.

ಎ) ಪೆರ್ಮೆ ಬಿ) ಶಾಲೆಯವರೆಗೆ ಸಿ) ಕನ್ನಡತಿ ಡಿ) ಬಳೆಗಾರ

**ಉತ್ತರ : ಬಿ) ಶಾಲೆಯವರೆಗೆ**

45. ಕೃದಂತನಾಮಕ್ಕೆ ಉದಾಹರಣೆ ಪದವಿದು.

ಎ) ಮಾಡಿದ ಬಿ) ಮಾಟ ಸಿ) ಮಾಡುತ್ತ ಡಿ) ಮಾಡುವಿಕೆ

**ಉತ್ತರ : ಎ) ಮಾಡಿದ**

46. 'ನಂಬಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಕೃದಂತನಾಮ ಬಿ) ಕೃದಂತಭಾವನಾಮ ಸಿ) ಕೃದಂತಾವ್ಯಯ ಡಿ) ತದ್ಧಿತಾಂತನಾಮ

**ಉತ್ತರ : ಬಿ) ಕೃದಂತಭಾವನಾಮ**

47. ಕೃದಂತಾವ್ಯಯಕ್ಕೆ ಉದಾಹರಣೆ ಪದವಿದು.

ಎ) ಉಣ್ಣದೆ ಬಿ) ತೊಡುಗೆ ಸಿ) ಕೊರೆತ ಡಿ) ತಿನ್ನುವ

**ಉತ್ತರ : ಬಿ) ತೊಡುಗೆ**

48. ಕಾವ್ಯವನ್ನು ಓದುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳ.

ಎ) ಪ್ರಾಸ ಬಿ) ಯತಿ ಸಿ) ಗಣ ಡಿ) ಮಾತ್ರೆ

**ಉತ್ತರ : ಬಿ) ಯತಿ**

49. ಭಾಮಿನಿ ಷಟ್ಪದಿಯಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ.

ಎ) 144 ಬಿ) 102 ಸಿ) 64 ಡಿ) 44

**ಉತ್ತರ : ಬಿ) 102**

50. ಗುರು–ಲಘು ಮೂರಿರೆ.

ಎ) ಮ–ನ ಗಣ ಬಿ) ಭ–ಯ ಗಣ ಸಿ) ಜ–ರ ಗಣ ಡಿ) ಸ–ತ ಗಣ

**ಉತ್ತರ : ಎ) ಮ–ನ ಗಣ**

51. ಪ್ರಾಸಾಕ್ಷರದ ಹಿಂದಿನ ಸ್ವರವು ದೀರ್ಘವಾಗಿರುವ ಪ್ರಾಸ.

ಎ) ಗಜಪ್ರಾಸ ಬಿ) ಹಯಪ್ರಾಸ ಸಿ) ಸಿಂಹಪ್ರಾಸ ಡಿ) ಅಜಪ್ರಾಸ

**ಉತ್ತರ : ಎ) ಗಜಪ್ರಾಸ**

52. ನಿರೋಷ್ಠ್ಯ, ಏಕಾಕ್ಷರ, ದ್ವ್ಯಕ್ಷರ, ತಾಲವ್ಯ ಮುಂತಾದ ಪ್ರಕಾರಗಳಿರುವ ಅಲಂಕಾರ.

ಎ) ಅನುಪ್ರಾಸ ಬಿ) ಛೇಕಾನುಪ್ರಾಸ ಸಿ) ಯಮಕ ಡಿ) ಚಿತ್ರಕವಿತ್ವ

**ಉತ್ತರ : ಡಿ) ಚಿತ್ರಕವಿತ್ವ**

53. ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವ ಅಲಂಕಾರ.

ಎ) ಉಪಮಾ ಬಿ) ರೂಪಕ ಸಿ) ದೃಷ್ಟಾಂತ ಡಿ) ಉತ್ಪ್ರೇಕ್ಷೆ

**ಉತ್ತರ : ಬಿ) ರೂಪಕ**

54. ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು.– ಇಲ್ಲಿ ಬಳಕೆಯಾಗಿರುವ ಅಲಂಕಾರ.

ಎ) ರೂಪಕ ಬಿ) ಉಪಮಾ ಸಿ) ಉತ್ಪ್ರೇಕ್ಷಾ ಡಿ) ಶ್ಲೇಷಾ

**ಉತ್ತರ : ಸಿ) ಉತ್ಪ್ರೇಕ್ಷಾ**

55. ಎರಡು ಬೇರೆ ಬೇರೆ ವಾಕ್ಯಗಳು ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವ ಕಂಡುಬರುವ ಅಲಂಕಾರ.

ಎ) ಉಪಮಾ ಬಿ) ಶ್ಲೇಷಾ ಸಿ) ಉತ್ಪ್ರೇಕ್ಷಾ ಡಿ) ದೃಷ್ಟಾಂತ

**ಉತ್ತರ : ಡಿ) ದೃಷ್ಟಾಂತ**

**II. ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ:**

1. ಸ್ವರಗಳು : 13 : : ಯೋಗವಾಹಗಳು : ________ ಉತ್ತರ : 2
2. ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಛ್, ಝ್ : ________ ಉತ್ತರ : ಮಹಾಪ್ರಾಣಾಕ್ಷರಗಳು
3. ರಾಹಿಲ : ಅಂಕಿತನಾಮ : : ಪೂಜಾರಿ : ________ ಉತ್ತರ : ಅನ್ವರ್ಥನಾಮ
4. ಶಿಕ್ಷಕ : ಅನ್ವರ್ಥನಾಮ : : ಪರ್ವತ : ________ ಉತ್ತರ : ರೂಢನಾಮ
5. ಮೊಟ್ಟಮೊದಲು : ದ್ವಿರುಕ್ತಿ : : ಮನೆ ಮಠ : ________ ಉತ್ತರ : ಜೋಡುನುಡಿ
6. ಕೆನೆ ಮೊಸರು : ಜೋಡುನುಡಿ : : ಜುಳು ಜುಳು : ________ ಉತ್ತರ : ಅನುಕರಣಾವ್ಯಯ
7. ಈಗೀಗ : ಈಗ ಈಗ : : ಕಟ್ಟ ಕಡೆಗೆ : ________ ಉತ್ತರ : ಕಡೆಗೆ ಕಡೆಗೆ
8. ಪ್ರಸಾದ : ಹಸಾದ : : ಯುದ್ಧ : ________ ಉತ್ತರ : ಜುದ್ಧ
9. ಚೀರ : ಸೀರೆ : : ದಿಟ್ಟಿ : : ________ ಉತ್ತರ : ದೃಷ್ಟಿ
10. ಬ್ರಹ್ಮ : ಬೊಮ್ಮ : : ಚಂದ್ರ : ________ ಉತ್ತರ : ಚಂದಿರ
11. ಪಟ್ಟಣ : ಪತ್ತನ : : ಸ್ಥಾನ : ________ ಉತ್ತರ : ಠಾಣ
12. ವಂಧ್ಯಾ : ಬಂಜೆ : : ವಿದ್ಯಾಧರ : ________ ಉತ್ತರ : ಬಿಜ್ಜೋದರ
13. ಪ್ರತಿಹಾರಿ : ಪಡಿಯರ : : ಸಂದೆಯ : ________ ಉತ್ತರ : ಸಂದೇಹ
14. ಹೀಂಗ : ಹೀಗೆ : : ಇಸವಾಸ : ________ ಉತ್ತರ : ವಿಶ್ವಾಸ
15. ಮ್ಯಾಗ : ಮೇಲೆ : : ಕಳುವ್ಯಾರೆ : ________ ಉತ್ತರ : ಕಳುಹಿಸಿದ್ದಾರೆ
16. ಹವಣು : ಸಿದ್ಧತೆ : : ಬನ್ನ : ________ ಉತ್ತರ : ಕಷ್ಟ
17. ಹರಿಕಾರ : ಮುಂದಾಳು : : ಸುಸಂಗತ : ________ ಉತ್ತರ : ಯೋಗ್ಯವಾದ
18. ಕೂರ್ಮೆ : ಸ್ನೇಹ : : ತಸ್ಕರ : ________ ಉತ್ತರ : ಕಳ್ಳ
19. ಕಂದಿದ : ಮಸುಕಾದ : : ಕಲುಷಿತ : ________ ಉತ್ತರ : ಮಲಿನ
20. ಅಗಸಿ : ಹೆಬ್ಬಾಗಿಲು : : ಮಸಲತ್ತು : ________ ಉತ್ತರ : ಪಿತೂರಿ
21. ದೃಗುಜಲ : ಕಣ್ಣೀರು : : ಅಣುಗಾಳ್ : ________ ಉತ್ತರ : ಗೆಳೆಯ
22. ವನದಿ : ಸಮುದ್ರ : : ಮಕಮಲ್ಲು : ________ ಉತ್ತರ : ನಯವಾದ ಬಟ್ಟೆ
23. ವಾಸಿ : ಪ್ರತಿಜ್ಞೆ : : ವಾಜಿ : ________ ಉತ್ತರ : ಕುದುರೆ
24. ಮರಭನಯಯಯ : ಸ್ರಗ್ಧರಾವೃತ್ತ : : ನಜಭಜಜಜರ : ____ ಉತ್ತರ : ಚಂಪಕಮಾಲಾವೃತ್ತ
25. ವಾರ್ಧಕ ಷಟ್ಪದಿ : 144 : : ಭಾಮಿನಿ ಷಟ್ಪದಿ : ________ ಉತ್ತರ : 102

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ರಾಹಿಲನು ಯಾರು?

**ಉತ್ತರ :** ರಾಹಿಲನು ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ವೈದ್ಯ.

2. ರಾಹಿಲನು ತರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?

**ಉತ್ತರ :** ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಬೇಕಾದ ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

3. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?

**ಉತ್ತರ :** ಗಡಿ ಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?

**ಉತ್ತರ :** ರಾಹಿಲನು 'ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ, ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು' ಎಂದು ಗಂಭೀರವಾಗಿ ನುಡಿದನು.

5. ಶಬರಿ ಯಾರ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದಳು?

**ಉತ್ತರ :** ಶಬರಿ ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದಳು.

6. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

**ಉತ್ತರ :** ಮತಂಗಾಶ್ರಮದಲ್ಲಿ ವಾಸವಾಗಿದ್ದ ತಪಸ್ವನಿ ಶಬರಿ.

7. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

**ಉತ್ತರ :** ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು 'ಧನು' (ಕಬಂಧ).

8. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?

**ಉತ್ತರ :** ಶ್ರೀರಾಮನಿಗೆ ಸಮರ್ಪಿಸಲು ಶಬರಿ ತಳಿರು, ಹೂ, ಹಣ್ಣು–ಹಂಪಲುಗಳನ್ನು ಸಂಗ್ರಹಿಸಿದ್ದಳು.

9. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?

**ಉತ್ತರ :** 'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿ ಲಂಡನ್ನಿನ ಪೇಟೆಯಲ್ಲಿದೆ.

10. 'ವೆಸ್ಟ್ ಮಿನಿಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

**ಉತ್ತರ :** 'ವೆಸ್ಟ್ ಮನಿಸ್ಟರ್ ಅಬೆ' ಸಂತರು, ಸಾರ್ವಭೌಮರು, ಕವಿಪುಂಗವರು ಮುಂತಾದವರ ಸ್ಮಾರಕವಾಗಿದೆ.

11. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

**ಉತ್ತರ :** 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿ ಆಂಗ್ಲರ ಸಾಮ್ರಾಜ್ಯದ ವೈಭವವು ಕಂಡುಬರುತ್ತದೆ.

12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?

**ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರು 1895ರಲ್ಲಿ ಪಟ್ಟಾಭಿಷಿಕ್ತರಾದರು.

13. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?

**ಉತ್ತರ :** ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಕಂಕಣಬದ್ಧರಾದರು.

14. ವಿಶ್ವೇಶ್ವರಯ್ಯನವರನ್ನು ದಿವಾನರಾಗಿ ನೇಮಿಸಿದವರು ಯಾರು?

**ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯನವರನ್ನು ದಿವಾನರಾಗಿ ನೇಮಿಸಿದರು.

15. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತದೆ?

**ಉತ್ತರ :** ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆಯನ್ನು' ಆಚರಿಸಲಾಗುತ್ತದೆ.

16. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?

**ಉತ್ತರ :** ಮನೆಮಂಚಮ್ಮನ ಕತೆ ಹೇಳಿದ ಕವಿ 'ಸಿದ್ಧಲಿಂಗಯ್ಯ'.

17. ಅಶೋಕ ಪೈ ಅವರ ವೃತ್ತಿ ಯಾವುದು?

**ಉತ್ತರ :** ಅಶೋಕ ಪೈ ಅವರ ವೃತ್ತಿ 'ಮನೋವೈದ್ಯರು'.

18. ವಚನಕಾರರಿಗೆ ಯಾವುದು ದೇವರಾಗಿತ್ತು?

**ಉತ್ತರ :** ವಚನಕಾರರಿಗೆ ಅವರ 'ಪ್ರಜ್ಞೆಯೇ' ದೇವರಾಗಿತ್ತು.

19. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?

**ಉತ್ತರ :** ಶಿವಾನುಭವ ಶಬ್ದಕೋಶ ಬರೆದವರು ಹಳಕಟ್ಟಿಯವರು.

20. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

**ಉತ್ತರ :** ಹಸಿದು ಮಲಗಿದ್ದ ಹುಲಿಯು 'ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ' ಎಂದು ಯೋಚಿಸಿತು.

21. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?
**ಉತ್ತರ** : ಶಾನುಭೋಗರ ಬ್ರಹ್ಮಾಸ್ತ್ರ 'ಖಿರ್ದಿ ಪುಸ್ತಕ'.
22. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
**ಉತ್ತರ** : ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ 'ಕಳ್ಳತನದ' ಆರೋಪವನ್ನು ಹೊರಿಸಿದನು.
23. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
**ಉತ್ತರ** : ದುಷ್ಟಬುದ್ಧಿಯು ವಟವೃಕ್ಷವೇ ಸಾಕ್ಷಿ ಎಂದು ಹೇಳಿದ್ದರಿಂದ ಧರ್ಮಾಧಿಕರಣರು ವಿಸ್ಮಯ ಹೊಂದಿದರು.
24. ದುಷ್ಠಬುದ್ಧಿಯ ತಂದೆಯ ಹೆಸರೇನು?
**ಉತ್ತರ** : ದುಷ್ಟಬುದ್ಧಿಯ ತಂದೆಯ ಹೆಸರು 'ಪ್ರೇಮಮತಿ'.
25. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?
**ಉತ್ತರ** : ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನೆಡೆಸಬೇಕು.
26. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
**ಉತ್ತರ** : ಕಲುಷಿತವಾದ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.
27. ಕಾಡುಮೇಡುಗಳ ಸ್ಥಿತಿ ಹೇಗಿದೆ?
**ಉತ್ತರ** : ಕಾಡುಮೇಡುಗಳು ಬರಡಾಗಿವೆ.
28. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?
**ಉತ್ತರ** : ಹಕ್ಕಿಯ ಗರಿಯಲ್ಲಿ 'ಬಿಳಿಹೊಳೆ' ಬಣ್ಣಗಳಿವೆ.
29. ಹಕಿಯ್ಕ ಕಣ್ಣುಗಳು ಯಾವುವು?
**ಉತ್ತರ** : ಹಕ್ಕಿಯ ಕಣ್ಣುಗಳು 'ಸೂರ್ಯ ಚಂದ್ರರು'.
30. ಹಕ್ಕಿಯು ಯಾವುದರ ಸಂಕೇತವಾಗಿದೆ?
ಉ: ಹಕ್ಕಿಯು 'ಕಾಲ ಪಕ್ಷಿಯ ಸಂಕೇತವಾಗಿದೆ.
31. ಹಕ್ಕಿ ಯಾರನ್ನು ಹರಸಿದೆ?
**ಉತ್ತರ** : ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.
32. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
**ಉತ್ತರ** : ಕುಂಪಣಿ ಸರಕಾರ ಎಲ್ಲಾ ಜನರ ಬಳಿಯಿರುವ ಆಯುಧಗಳನ್ನು ಸಕಾರಕ್ಕೆ ಒಪ್ಪಿಸುವಂತೆ ಆದೇಶ ಮಾಡಿತು.
33. ಹಲಗಲಿಯ ನಾಲ್ವರು ಪ್ರಮುಖರು ಯಾರು?
**ಉತ್ತರ** : ಪೂಜೇರಿಹನುಮ, ಬ್ಯಾಡರಬಾಲ, ಜಡಗ ಮತ್ತು ರಾಮ ಇವರು ಹಲಗಲಿಯ ನಾಲ್ವರು ಪ್ರಮುಖರು.
34. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?
**ಉತ್ತರ** : 'ಹಲಗಲಿ ಬಂಟರ ಹತಾರ ಕದನ' ಘಟನೆಯು ಹಲಗಲಿ ಲಾವಣಿಗೆ ಕಾರಣವಾಗಿದೆ.
35. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?
**ಉತ್ತರ** : ಶ್ರೀಕೃಷ್ಣನು ಕರ್ಣನನ್ನು ಮೈದುನತನದ ಸರಸವಾಡುತ್ತಾ ಎಳೆದು ರಥದಲ್ಲಿ ಕೂರಿಸಿಕೊಂಡನು.
36. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
**ಉತ್ತರ** : ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು 'ನಕುಲ ಸಹದೇವರು'.
37. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
**ಉತ್ತರ** : ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿಯ ಎದೆಯ ಹಸುರಿನಂತಿದೆ.
38. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
**ಉತ್ತರ** : ಕವಿಯು ನೋಡಿದ ಅಡಕೆಯ ತೋಟ ಗದ್ದೆಯ ಪಕ್ಕದಲ್ಲಿರುವ ಕಾಡಿನ ಅಂಚಿನಲ್ಲಿದೆ.
39. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
**ಉತ್ತರ** : ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸ ಹಸುರಾದ ಜಮಖಾನೆಯಂತೆ ಕಂಡಿದೆ.
40. 'ದಿನಪಸುತ' ಎಂದರೆ ಯಾರು?
**ಉತ್ತರ** : ದಿನಪಸುತ ಎಂದರೆ 'ಕರ್ಣ'.
41. 'ಅಂತಕಾತ್ಮಜ' ಎಂದರೆ ಯಾರು?
**ಉತ್ತರ** : ಅಂತಕಾತ್ಮಜ ಎಂದರೆ 'ಯುಧಿಷ್ಠಿರ'.(ಧರ್ಮರಾಯ)
42. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು?
**ಉತ್ತರ** : ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು 'ದುರ್ಯೋಧನ'.

43. ಯಜ್ಞಾಶ್ವವನ್ನು ಕಟ್ಟಿದವರು ಯಾರು?

**ಉತ್ತರ :** ಯಜ್ಞಾಶ್ವವನ್ನು ಲವನು ಕಟ್ಟಿದನು.

44. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

**ಉತ್ತರ :** ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.

45. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ?

**ಉತ್ತರ :** ವಿವೇಕಾನಂದರೆಂದರೆ ಸಾಮಾಜಿಕ ಸಂಕಟ, ಸಿಟ್ಟು, ಸ್ಫೋಟ, ಸ್ಪಷ್ಟತೆಗಳ ರೂಪಕವಾಗಿದೆ.

46. ವಿವೇಕಾನಂದರನ್ನು 'ಮಾನವತಾಮಿತ್ರ'ರೆಂದು ಕರೆದವರಾರು?

**ಉತ್ತರ :** ವಿವೇಕಾನಂದರನ್ನು ಮನವತಾಮಿತ್ರರೆಂದು ಕರೆದವರು ಕುವೆಂಪು.

47. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**ಉತ್ತರ :** ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

48. ಯಾರಿಗೆ ವಸಂತಮುಖ ತೋರಿಸಲಿಲ್ಲ?

**ಉತ್ತರ :** ಕಮ್ಮಾರ, ಕುಂಬಾರ, ನೇಕಾರ, ಮತ್ತು ಕೇರಿಯ ಮಾರನಿಗೆ ವಸಂತಮುಖ ತೋರಲಿಲ್ಲ.

49. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಎಂದು ನಡೆಯಿತು?

**ಉತ್ತರ :** ಏಪ್ರಿಲ್ 13, 1919 ರಂದು ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆಯಿತು.

50. ಭಗತ್ ಸಿಂಗ್‌ನ ಸಹಚರರು ಯಾರು?

**ಉತ್ತರ :** ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತ ಇವರು ಭಗತ್ ಸಿಂಗ್‌ನ ಸಹಚರರು.

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

1. ಡಾಕ್ಟರ್ ಗೆ ವಿಮಾನದ ಪೈಲಟ್ ಏನು ಹೇಳಿದನು?

**ಉತ್ತರ :** ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ, ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಇಳಿಯೋಣವೆಂದರೆ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ. ಎಂದು ಡಾಕ್ಟರ್ ಗೆ ವಿಮಾನದ ಪೈಲಟ್ ನುಡಿದನು.

2. ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

**ಉತ್ತರ :** ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆ ಹಾಯುತ್ತಿರಲಿಲ್ಲ, ಗಡಿ ಪ್ರದೇಶದಲ್ಲಿ ಬ್ಲಾಕ್ ಔಟ್ ನಿಯಮವನ್ನು ಪಾಲಿಸಲಾಗುತ್ತಿರುವ ಈ ಸಂದರ್ಭದಲ್ಲಿ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ರಾಹಿಲನ ಮನದಲ್ಲಿ ಮೂಡಿದವು.

3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?

**ಉತ್ತರ :** " ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆ. ಆದರೆ ನನ್ನ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ!" ಎಂದು ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನಡಿದಳು.

4. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

**ಉತ್ತರ :** ದೊರೆವಳೆ ಸೀತೆ ಭೂಮಿಜಾತೆ ಆತ್ಮಕಾಮಕಲ್ಪಲತೆ ನಾನೆರೆವೆ ದೊರೆವಳೇ? ಈ ಬೇಗೆ ಕೆಡದಲಾ, ನನ್ನೆದೆಯಾ ಬಿಡದಲಾ ಈ ಜಗವ ಸುಡದಲಾ, ಹಾ" ಎಂದು ರಾಮನು ಗಿರಿವನವನ್ನು ಪ್ರಾರ್ಥಿಸಿದನು.

5. ಶಬರಿಯು ರಾಮನ ಗುಣವನ್ನು ಹೇಗೆ ಹಾಡಿಹೊಗಳುತ್ತಾಳೆ?

**ಉತ್ತರ :** ರಾಮನು ದಶರಥನ ಪುತ್ರನಂತೆ, ಸಾಧುಜನರ ಮಿತ್ರನಂತೆ. ಧೀರ, ಶೂರ, ಗಂಭೀರ ಸದ್ಗುಣ ಸಾರನಂತೆ. ರಾಮನು ಅಂಜಿಸುವವರಂಜುವಂತೆ ಬಿಲ್ಲ ಹಿಡಿದು ಬರುವನಂತೆ. ಆದರೂ ಬಲು ಸೌಮ್ಯನಂತೆ. ಹಸುಳೆಯಂತೆ ಕಾಣುವ ರಾಮನು ಅರಸುತನವ ತೊರೆದು ತವಸಿತನವ ಕೊಂಡನಂತೆ. ರಾಮನು ಮನದಲ್ಲಿ ಭಯವೇ ಇಲ್ಲವಂತೆ, ಕೆಟ್ಟಕನಸಿನಿರುಳ ಕಳೆವ ಸುಪ್ರಭಾತದಂಥವನು. ಗುರುಸಿದ್ದರೇ ಮೆಚ್ಚಿದಂಥ ಸನ್ಮಂಗಳ ಮೂರುತಿ" ಎಂದು ಶಬರಿಯು ರಾಮನ ಗುಣವನ್ನು ಹಾಡಿಹೊಗಳಿದ್ದಾಳೆ.

6. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ದತೆಗಳೇನು?

**ಉತ್ತರ :** ರಾಮನ ಸ್ವಾಗತಕ್ಕಾಗಿ ಶಬರಿಯು ತಳಿರು ಹೂ ಹಣ್ಣು ಹಂಪಲುಗಳನ್ನು ಸಂಗ್ರಹಿಸಿದ್ದಳು. ಮಧುಪರ್ಕವನ್ನು ತಯಾರಿಸಿಡುತ್ತಿದ್ದಳು. ಬಗೆ ಬಗೆಯ ಕಂಪನಿಡುವ ಹೂವಿನ ಮಾಲೆಯನ್ನು ಕಟ್ಟುತ್ತಿದ್ದಳು. ಹೀಗೆ ಶಬರಿಯು ರಾಮನ ಸ್ವಾಗತಕ್ಕಾಗಿ ಸಿದ್ದತೆಗಳನ್ನು ಮಾಡಿಕೊಂಡಿದ್ದಳು.

7. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

**ಉತ್ತರ :** ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾದಳು. ನಂತರ ರಾಮನ ಬಳಿ ಬಂದು ಅವನ ಮೈಯನ್ನು ಮುಟ್ಟಿ ಪಾದಕ್ಕೆ ನಮಸ್ಕರಿಸಿ ಅವನ ಕೈಯನ್ನು ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿದಳು. ಪ್ರೀತಿಯಿಂದ ಕಟ್ಟಿದ ಹೂ ಮಾಲೆಯನ್ನು ಅವನ ಕೊರಳಿಗೆ ಹಾಕಿ ತಾನು ತಂದಹಣ್ಣನ್ನು ನೀಡುತ್ತಾ ಜಗತ್ತಿನಲ್ಲಿ ಇದರಷ್ಟು ರುಚಿಯಾದ ಹಣ್ಣು ಯಾವುದೂ ಇಲ್ಲ, ಎಂದು ಹೇಳಿ ಧನ್ಯಭಾವದಿಂದ ಆನಂದಿಸಿದಳು.

8. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?

**ಉತ್ತರ :** ವೂಲವರ್ಥ ಅಂಗಡಿಯಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೂ ಸಾಮಾನುಗಳು ಸಿಗುತ್ತವೆ. ಇಲ್ಲಿ ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆ ಪಾತ್ರೆ, ಎಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಎಲ್ಲವೂ ದೊರೆಯುತ್ತವೆ.

9. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?

**ಉತ್ತರ :** ಲಂಡನ್ನಿನಲ್ಲಿ ಸಾಮಾನ್ಯವಾಗಿ ಎಲ್ಲ ಅಂಗಡಿಗಳಲ್ಲಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಹಾರ ಗೃಹಗಳಲ್ಲಿ ಮಾಣಿಗಳಿಲ್ಲ, ಬೆಂಗಳೂರಿ ಮಾತಿನಲ್ಲಿ ಹೇಳುವುದಾದರೆ ಅಮ್ಮಣ್ಣಿಗಳಿರುತ್ತಾರೆ. ಅಂಗಡಿಯಲ್ಲಿ ಟೈಪಿಸ್ಟ್, ಕಾರಕೂನ, ಸಿನಿಮಾ ಗೃಹದಲ್ಲಿ ಜಾಗವನ್ನು ಹುಡುಕಿ ಕೊಡುವವರು ಹೆಣ್ಣುಮಕ್ಕಳೇ, ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ.

10. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

**ಉತ್ತರ :** ಲಂಡಿನ್ನಿನ ಹೆಣ್ಣುಮಕ್ಕಳು ಧರಿಸುವ ಟೊಪ್ಪಿಗೆಯ ವಿಶೇಷತೆಯನ್ನು ತಿಳಿಸುತ್ತಾ ಲೇಖಕರು ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಟಪಕ್ಷ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೇ? ಒಬ್ಬ ಮನುಷ್ಯನಂತೆ ಇನ್ನೊಬ್ಬರಿಲ್ಲ ಎಂದು ಹೇಳುತ್ತಾರೆ.

11. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

**ಉತ್ತರ :** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿ ನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

12. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

**ಉತ್ತರ :** ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು ಅದು ಕೆಲವೇ ಜನರ ಸೊತ್ತಾಗದೆ, ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

13. ನೆಹರೂ ಅವರು ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?

**ಉತ್ತರ :** "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ನೀವು ಈಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ, ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ನೆಹರೂ ಅವರು ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿದರು.

14. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?

**ಉತ್ತರ :** ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಅಶೋಕ ಪೈ ಅವರ ಸಂಶೋಧನೆ ಹೇಳುತ್ತದೆ. ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೇನೋ, ಈ ಅನುಕಂಪನ ಇಡೀ ಜೀವ ಸಂಕುಲವನ್ನೇ ಒಂದು ಎಂದು ಹೇಳುತ್ತದೆ. ಇದೇ ಅಶೋಕ ಪೈ ಹೇಳಿದ ಸಂಶೋಧನಾ ಸತ್ಯ.

15. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.

**ಉತ್ತರ :** ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ, ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ. ಅದು ತರ್ಕವಲ್ಲ, ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

16. ಪ್ರಜ್ಞೆಯನ್ನೇ ದೇವರು ಅಂದುಕೊಂಡರೆ ಆಗುವ ತೊಂದರೆ ಏನು?

**ಉತ್ತರ :** ಪ್ರಜ್ಞೆಯನ್ನೇ ದೇವರು ಅಂದುಕೊಂಡರೆ ಸುಡುವ ಬೆಂಕಿಯನ್ನು ನೆತ್ತಿ ಮೇಲೆ ಇಟ್ಟುಕೊಂಡಂತಾಗುತ್ತದೆ. ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ. ಅದೇ ಕಷ್ಟ ಆಗೋದು. ಇತರ ದೇವರಿಗಾದರೆ ಯಾವುದೇ ಉಗ್ರ ದೇವತೆ ಇರಲಿ, ಏನೋ ಸ್ವಲ್ಪ ಹೊಟ್ಟೆ ಒಳಕ್ಕೆ ಹಾಕ್ಕೊಂತ ಸುಳ್ಳುಪಳ್ಳು ಹೇಳಿಬಿಡಬಹುದು. ಆದರೆ ಪ್ರಜ್ಞೆ ಮುಂದೆ ಇದು ನಡೆಯದು.

17. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

**ಉತ್ತರ :** ಶಾನುಭೋಗರು ಒಮ್ಮೆ ಚಿಕ್ಕನಾಯಕನಹಳ್ಳಿಗೆ ಇರಸಾಲಿಗೆ ಹೋಗಿ ಬರುವಾಗ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು . ಕಾಡುದಾರಿ, ಆದರೂ ಬೆಳದಿಂಗಳ ದಿನ ಸ್ವಲ್ಪ ಹೆಜ್ಜೆ

ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಬೇಗ ಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಹಸಿವಿನ ಜೊತೆ ಭಯವೂ ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

18. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

**ಉತ್ತರ** : ಹುಲಿಯು ಬೇಟೆಯಾಡುವಾಗ ಒಂದು ಧರ್ಮವನ್ನು ಅನುಸರಿಸುತ್ತದೆ. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ.

19. ಖಿರ್ದಿ ಪುಸ್ತಕದಿಂದ ಶಾನುಭೋಗರಿಗೆ ಆದ ಲಾಭವೇನು?

**ಉತ್ತರ** : ಶಾನುಭೋಗರಿಗೆ ಹುಲಿಯಿಂದ ಒದಗಿದ ವಿಪತ್ತಿನ ಸನ್ನಿವೇಶದಲ್ಲಿ ಖಿರ್ದಿ ಪುಸ್ತಕವು ನೆರವಿಗೆ ಬಂದಿತು. ಶಾನುಭೋಗರು ಪುಸ್ತಕವನ್ನು ಬ್ರಹ್ಮಾಸ್ತ್ರವಾಗಿ ಬಳಸಿ ಹುಲಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಅದು ಅವರಿಗೆ ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ಪ್ರಾಣವನ್ನು ಕಾಪಾಡಿತು.

20. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

**ಉತ್ತರ** : ಧರ್ಮಬುದ್ಧಿಯು ದುಷ್ಟಬುದ್ಧಿಯನ್ನು ಕರೆದು ಹೊನ್ನನ್ನು ಹಂಚಿಕೊಳ್ಳೋಣ ಎಂದಾಗ ದುಷ್ಟಬುದ್ಧಿಯು ಪಾಪ ಬುದ್ಧಿಯವನಾಗಿ "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲಿಯೇ ಬಚ್ಚಿಡೋಣ" ಎಂದು ಸಲಹೆಯಿತ್ತನು.

21. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

**ಉತ್ತರ** : ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟ ಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

22. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

**ಉತ್ತರ** : ಧರ್ಮಾಧಿಕರಣರು ವಟವೃಕ್ಷಕ್ಕೆ "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯ, ಆ ಕಾರಣದಿಂದ ನಿನ್ನನ್ನು ಸಾಕ್ಷಿಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೇ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

23. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

**ಉತ್ತರ** : ಕತ್ತಲೆಯನ್ನು ಹೋಗಲಾಡಿಸುವ ದೀಪದಿಂತೆ ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ಪ್ರೀತಿ ಅಜ್ಞಾನದ ಹಣತೆ ಹಚ್ಚಿ ಸ್ವಾಸ್ಥದ ನೆಲೆಯಾಗಿಸಬೇಕು. ಬಿರುಗಾಳಿಯಂತೆ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎಚ್ಚರದಿಂದ ಬಗೆಹರಿಸಿ ಮುನ್ನಡೆಯಬೇಕು. ಜೀವನವೆಂಬ ಹಡಗನ್ನು ಜ್ಞಾನ, ಪ್ರೀತಿಯ ಬೆಳಕಿನಲ್ಲಿ ಮುನ್ನಡೆಸಬೇಕು ಎಂದು ಕವಿ ಹೇಳಿದ್ದಾರೆ.

24. ಕಾಡುಗಳಿಗೆ ಹೇಗೆ ಮುಟ್ಟಬೇಕಾಗಿದೆ?

**ಉತ್ತರ** : ಮನುಷ್ಯನ ದುರಾಸೆಯಿಂದ ನದೀಜಲಗಳು ಕಲುಷಿತವಾಗಿದೆ. ಮುಂಗಾರಿನ ಮಳೆಯು ಹೊಯ್ದಾಗ ನದಿಜಲಗಳ ಕಲ್ಮಶಗಳೆಲ್ಲ ಕೊಚ್ಚಿ ಹೋಗಿ ತಿಳಿನೀರಾಗುತ್ತದೆ. ನಮ್ಮ ಸಮಾಜವು ಭ್ರಷ್ಟಾಚಾರ, ಕೋಮುಗಲಭೆ ಮುಂತಾದ ಸಮಸ್ಯೆಗಳಿಂದ ತುಂಬಿಹೋಗಿದೆ. ಎಲ್ಲರೂ ನೈತಿಕ ಶಿಕ್ಷಣವನ್ನು ಪಡೆಯುವ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸಬಹುದು. ಎಲೆ ಉದುರಿಸಿ ಬರಡಾಗಿಸುವ ಮರವು ವಸಂತಕಾಲ ಬಂದಾಗ ಚಿಗುರುವ ಹಾಗೆ ನಿರಾಶೆ, ಅಪನಂಬಿಕೆ ಭಯದಿಂದ ತುಂಬಿದ ಮನಸ್ಸುಗಳಿಗೆ ಪ್ರೀತಿ, ವಿಶ್ವಾಸ, ಭರವಸೆಯನ್ನು ತುಂಬಿ ಹೊಸ ಸಮಾಜವನ್ನು ಕಟ್ಟೋಣ ಎಂದು ಕವಿ ಹೇಳಿದ್ದಾರೆ.

25. ನಾಳಿನ ಕನಸುನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

**ಉತ್ತರ** : ಮತಗಳು ಬೇರೆಯಾದರು ಅದರ ದಾರಿ ಒಂದೆ. ಅದೆ ಮನುಷ್ಯ ಒಳ್ಳೆಯವನಾಗಿ ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಎಲ್ಲಾ ಮತ ಗ್ರಂಥಗಳು ಹೇಳುತ್ತವೆ. ಅದನ್ನು ಅರ್ಥ ಮಾಡಿಕೊಂಡು ಸಹಬಾಳ್ವೆ ಮಾಡಬೇಕು. ಭಯದಿಂದ ನಡುಗುತ್ತಿರುವ ಮನಸ್ಸುಗಳಿಗೆ ಧೈರ್ಯವನ್ನು ಹೇಳೋಣ. ಸಂಶಯವನ್ನು ಹೋಗಲಾಡಿಸಿ ಅವರಿಗೆ ಉತ್ತಮ ಶಿಕ್ಷಣವನ್ನು ನೀಡಿ ಉತ್ತಮ ಭವಿಷ್ಯದ ಕನಸನ್ನು ನನಸಾಗಿಸಲು ಸಹಾಯ ಮಾಡೋಣ ಎಂದು ಕವಿ ಹೇಳಿದ್ದಾರೆ.

26. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

**ಉತ್ತರ** : ಕವಿ ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಹೇಳಿದ್ದಾರೆ. ಕಾಲವೆಂಬ ಹಕ್ಕಿಯು ಆಕಾಶದಷ್ಟೆ ವಿಶಾಲವು, ಅನಂತವೂ ಆಗಿದೆ. ಇದಕ್ಕೆ ಆದಿ ಅಂತ್ಯವಿಲ್ಲ. ಈ ಹಕ್ಕಿಗೆ ಮೇಘಮಂಡಲಕ್ಕೆ ಸಮನಾದ ನೀಲಿ ಬಣ್ಣವಿದೆ. ಆಕಾಶದಲ್ಲಿ ಮೋಡಗಳು ಚಲಿಸುವ ಹಾಗೆ ಕಾಲಪಕ್ಷಿಯು ಯುಗಯುಗಗಳನ್ನು ಹಿಂದಕ್ಕೆ ತಳ್ಳುತ್ತಾ ಮುಂದೆ ಸಾಗುತ್ತಿದೆ. ಆಕಾಶದಲ್ಲಿ ನಕ್ಷತ್ರಗಳು ಮಾಲೆಯಾಗಿರುವಂತೆ ಕಾಲದ ಪಕ್ಷಿಯು ದಿನ, ಮಾಸ, ವರ್ಷವೆಂಬ ಮಾಲೆಯನ್ನು ಧರಿಸಿದೆ. ಹಗಲು ರಾತ್ರಿಗಳೆಂಬ ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡಿದೆ ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

27. ಹೊಸಗಾಲದ ಹಸು ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

**ಉತ್ತರ :** ಯುಗದಿಂದ ಯುಗಕ್ಕೆ ಕಾಲ ಬದಲಾಗುತ್ತದೆ. ಮಾನವನ ಜೀವನದಲ್ಲೂ ಬದಲಾವಣೆಯಾಗುತ್ತದೆ. ಮುಂದಿನ ಯುಗವು ಹೊಸತನವನ್ನು ತರುವಂತಹ ಪರಿವರ್ತನೆಯ ಕಾಲವಾಗುತ್ತದೆ. ಮುದುಡಿಹೋಗಿದ್ದ ಮನಸ್ಸುಗಳಿಗೆ, ಪ್ರಕೃತಿಗೆ ಹೊಸ ಚೇತನವನ್ನು ನೀಡುತ್ತದೆ. ಹೊಸ ಕಾಲದ ನಿರ್ಮಾಪಕರಾದ ಹೊಸಮಕ್ಕಳನ್ನು ಹರಸಿ ಕಾಲವು ಮುಂದೆ ಹೋಗುತ್ತದೆ.

28. ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ?

**ಉತ್ತರ :** ಮನುಷ್ಯ ಎಂದಿಗೂ ಸೃಜನಶೀಲ ಒಂದರನಂತರ ಒಂದು ಯಶಸ್ಸನ್ನು ಪಡೆಯಲು ಹಾತೊರೆಯುವನು. ತನ್ನ ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿ ನೀರನ್ನು ಹೀರಿದ ಪ್ರಪಂಚವನ್ನೆಲ್ಲಾ ಸುತ್ತಿ ಬಂದ ಕಾಲ ಪಕ್ಷಿಯು ಹಾರಿದಂತೆ, ಕಾಲ ಚಕ್ರ ಹುರಿಳಿದಂತೆ ಆತನ ಸಮಾಚಾರ ಚಂದಿರ ಲೋಕದ ಕಡೆ, ಅಲ್ಲಿಯ ನೀರನ್ನು ಕುಡಿದು ಸಂತೋಷಪಟ್ಟ, ಹಾರಲು ಆಡಲು ತಾ ಹಾರಾಡಲು ಮಂಗಳ ಗ್ರಹಕ್ಕೂ ತಲುಪಿದೆ. ಹೀಗೆ ಕಾಲದ ಹಕ್ಕಿಯು ತನ್ನ ಮೇರೆ ಮೀರಿ ಮುಂದೆ ಸಾಗಿ ಅಲ್ಲಿಯ ನೀರನ್ನು ಹೀರಿದೆ.

29. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

**ಉತ್ತರ :** ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟೀಷರು ಆಡಳಿತ ಸೂತ್ರ ಹಿಡಿದರು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮನ್ನು ವಿರೋಧಿಸಿ ಅಲ್ಲಲ್ಲಿ ದಂಗೆಗಳಾದವು.

30. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಲಾಗಿದೆ?

**ಉತ್ತರ :** ಲಾವಣಿಗಳು ಜನಪದ ಸಾಹಿತ್ಯದ ಒಂದು ಪ್ರಕಾರವಾಗಿದ್ದು ವೀರತನ, ಸಾಹಸವನ್ನು ವರ್ಣಿಸಿರುವುದರಿಂದ ಲಾವಣಿ ಎಂದರೆ '**ವೀರಗೀತೆ**' ಎಂದು ಕರೆಯುವುದು ವಾಡಿಕೆ. ಕನ್ನಡ ನಾಡಿನ ಮೇಲೆ ನಡೆದ ದಾಳಿ ದಂಗೆಗಳನ್ನು ವೀರರು ತಡೆದು ತಮ್ಮ ತ್ಯಾಗ ಬಲಿದಾನಗಳಿಂದ ಅಮರರಾಗಿದ್ದಾರೆ. ಕನ್ನಡಿಗರ ಗೌರವವನ್ನು ಉಳಿಸಿದ್ದಾರೆ. ಇಂತಹ ವೀರಕಲಿಗಳ ವೀರ, ಸಾಹಸ, ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳೇ ಲಾವಣಿಗಳು.

31. ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತದನು?

**ಉತ್ತರ :** ಕೃಷ್ಣಸಂಧಾನವು ದುರ್ಯೋಧನನ ಹಠದಿಂದ ವಿಫಲವಾಗುತ್ತದೆ. ಕರ್ಣನ ಬಳಿಗೆ ಬಂದ ಧರ್ಮಪಕ್ಷಪಾತಿಯಾದ ಕೃಷ್ಣನು ಕರ್ಣನನ್ನು ತನ್ನ ರಥದ ಪೀಠದಲ್ಲಿ ಕುಳ್ಳಿರಿಸಿಕೊಂಡು **"**ನಿಮ್ಮಲ್ಲಿ ಯಾದವರು ಮತ್ತು ಕೌರವರಲ್ಲಿ ಯಾವುದೇ ಬೇಧವಿಲ್ಲ. ಸರಿಯಾಗಿ ವಿಚಾರಿಸಿ ನೋಡಿದರೆ ಈ ಎರಡೂ ವಂಶಗಳಲ್ಲಿ ಮೊದಲು ಮತ್ತು ಎರಡು ಎಂಬುದಿಲ್ಲ. ಈ ಭೂಮಿಗೆ ನೀನೇ ನಿಜವಾದ ಒಡೆಯನಾಗಬೇಕು. ಇದು ನಿನ್ನ ಅರಿವಿಗೆ ಬಂದಿಲ್ಲವಷ್ಟೆ**"** ಎಂದು ಕೃಷ್ಣನು ಕರ್ಣನ ಮನದಲ್ಲಿ ಭಯವನ್ನು ಬಿತ್ತಿದನು.

32. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

**ಉತ್ತರ :** ಕುಂತಿಯು ಮೊದಲು ಸೂರ್ಯನನ್ನು ಸ್ಮರಿಸಿ ಮಂತ್ರವನ್ನು ಪಠಿಸಿ ಕರ್ಣನನ್ನು ಪಡೆದಳು. ಯಮಧರ್ಮನ ಸ್ಮರಿಸಿ ಮಂತ್ರವನ್ನು ಪಠಿಸಿ ಧರ್ಮರಾಯನನ್ನು, ವಾಯುದೇವನನ್ನು ಸ್ಮರಿಸಿ ಮಂತ್ರವನ್ನು ಪಠಿಸಿ ಭೀಮನನ್ನು ಮತ್ತು ಇಂದ್ರನ್ನು ಸ್ಮರಿಸಿ ಮಂತ್ರವನ್ನು ಪಠಿಸಿ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನಿದೇವತೆಗಳನ್ನು ಸ್ಮರಿಸಿ ಮಂತ್ರವನ್ನು ಪಠಿಸಿ ನಕುಲ ಸಹದೇವರನ್ನು ಪಡೆದಳು.

33. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?

**ಉತ್ತರ :** ಕವಿಗೆ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಭೂಮಿಯು ನವೀನವಾಗಿ ಕಾಣುತ್ತಿದೆ. ಆಕಾಶವು ಹಸುರು, ಮುಗಿಲು ಹಸುರು, ಗದ್ದೆಯ ಬಯಲು ಹಸಸುರಾಗಿ ಕವಿಯ ಕಣ್ಮನ ಸೆಳೆಯುತ್ತಿದೆ. ನಡುವಿನ ಕಣಿವೆಯೂ ಹಸುರಿನಿಂದ ಕಂಗೊಳಿಸುತ್ತಿದೆ ಇವುಗಳ ಮೇಲೆ ಬೀಳುವ ಸಂಜೆಯ ಬಿಸಿಲು ಕೂಡ ಕವಿಯ ನೋಟಕ್ಕೆ ಹಸುರಾಗಿ ಕಾಣಿಸುತ್ತಿವೆ.

34. ಹಸುರು ಸಕಲೇಂದ್ರಿಯವನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

**ಉತ್ತರ :** ಆಶ್ವೀಜ ಮಾಸದ ನವರಾತ್ರಿಯ ಸಂದರ್ಭ ಕವಿಯು ಮಲೆನಾಡಿನ ಸೊಬಗಲ್ಲಿ ಮಿಂದೆದ್ದಿದ್ದಾರೆ. ಸುರಿಯುವ ಮಳೆಯಲ್ಲಿ ಚಿಗುರಿ ಸೊಂಪಾಗಿ ಬೆಳೆದ ಗಿಡಮರಗಳು ಪ್ರಕೃತಿಯ ಸೊಬಗನ್ನು ಹೆಚ್ಚಿಸಿ ಕವಿಗೆ ನೋಡಿದ್ದೆಲ್ಲಾ, ಕೇಳಿದ್ದೆಲ್ಲಾ, ಸ್ಪರ್ಷಿಸಿದ್ದೆಲ್ಲಾ ಹಸುರಾಗಿ ಕಾಣಿತ್ತಿದೆ, ಆಕಾಶದಿಂದ ಭೂಮಿಯವರೆಗೆ ಎಲ್ಲವೂ ಹಸುರಾಗಿ ಕಾಣಿತ್ತಿದೆ ಹೂವಿನ ಕಂಪು, ಗಾಳಿಯ ತಂಪು, ಹಕ್ಕಿಯ ಕೊರಳಿನ ಇಂಪು ಹಸುರಾಗಿ ಭೂಮಿಯ ಉಸಿರೆ ಹಸುರಾಗಿ ಕವಿಯ ಸಕಲೇಂದ್ರಿಯವನ್ನು ವ್ಯಾಪಿಸಿದೆ.

35. ಕವಿಯಾತ್ಮ ಹಸುರುಗಟ್ಟಲು ಕಾರಣವಾದ ಹಿನ್ನಲೆಯ ಅಂಶಗಳೇನು?

**ಉತ್ತರ :** ಆಶ್ವೀಜ ಮಾಸದ ನವರಾತ್ರಿಯಲ್ಲಿ ಧಾತ್ರಿಯು ನವನವೀನವಾಗಿ ಮೈತಳೆದು ನಿಂತಿದೆ. ಕವಿಗೆ ಎತ್ತ ನೋಡಿದರೂ ಮಲೆ, ಕಣಿವೆ, ಗದ್ದೆಯ ಬಯಲು ಹಾಸಿದ ಹಸುರಿನ ಜಮಖಾನೆಯಂತೆ ತೋರುತ್ತಿದೆ ಅತ್ತ, ಇತ್ತ, ಸುತ್ತ, ಎತ್ತಲೂ ಹಸುರಿನ್ನೇ ಕಾಣುವ ಕಣ್ಣು ಹಸುರಿನ ಸಾಗರವನ್ನೆ (ವಿಶಾಲತೆ) ಕಲ್ಪಿಸಿಕೊಳ್ಳುತ್ತಿದೆ ಇಂತಹ ಹಸುರಿನ ಪ್ರಕೃತಿಯ ಮಧ್ಯದಲ್ಲಿರುವ ಕವಿಯ ಆತ್ಮವು ಹಸುರಾಗಿ ಸಂತಸವನ್ನು ಪಡೆಯುತ್ತಿದೆ.

36. ತಾನು ಹೋರಡುತ್ತಿರುವುದು ನೆಲಕ್ಕಲ್ಲ  ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?

**ಉತ್ತರ** : ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ನೋಡಲು ದುರ್ಯೋಧನನು ಬರುತ್ತಾನೆ ಆಗ ಭೀಷ್ಮನು ನೀನು ಒಪ್ಪುವುದಾದರೆ ಪಾಂಡವರೋಡನೆ ಸಂದಿಯನ್ನು ಮಾಡಿಸುತ್ತೇನೆ ನಾನು  ಹೇಳಿದರೆ ಅವರು ಕೇಳುತ್ತಾರೆ ಎನ್ನುತ್ತಾನೆ. ಆಗ ದುರ್ಯೋಧನನು ನಾನು ನಮಸ್ಕರಿಸಲು ಬಂದಿದ್ದೇನೆಯೇ ಹೊರತು ಸಂಧಿಮಾಡಿಕೊಳ್ಳಲು ಅಲ್ಲ. ನೆಲಕ್ಕಾಗಿ ಹೋರಾಡುತ್ತೇನೆ ಎಂದು ಕೊಂಡಿದ್ದೀಯಾ ಇಲ್ಲ. ಛಲಕ್ಕಾಗಿ ಹೋರಾಡುತ್ತೇನೆ. ಪಾಂಡುಸುತರೊಳೀನೆಲನಿದು ಪಾಳು ನೆಲ ಈ ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು ಕೊಲಿಸಿದ ಈ ನೆಲದಲ್ಲಿ ಮಾತ್ರ ಬಾಳೂವುದಿಲ್ಲ ಎಂದು ಹೇಳುತ್ತಾನೆ.

37. ಈ ನೆಲನೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?

**ಉತ್ತರ** : ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಮತ್ತು ಪ್ರೀತಿಯ ಗೆಳೆಯನಾದ ಕರ್ಣನನ್ನು ಸಾಯಿಸಿದ ಪಾರ್ಥಭೀಮರು ಇರುವವರೆಗೆ ನನ್ನ ದೇಹದಲ್ಲಿ ಪ್ರಾಣವಿರುವವರೆಗೂ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ ಅವರಿಬ್ಬರನ್ನು ಮೊದಲು ಸಾಯಿಸಿ ಬಳಿಕ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳುವೆನು ಅಲ್ಲಿಯವರೆಗೂ ಈ ನೆಲದೊಡನೆ ಸಹಬಾಳ್ವೆ ಮಾಡುವುದಿಲ್ಲ ಎಂದು ದುರ್ಯೋಧನ ಹೇಳುತ್ತಾನೆ.

38. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿರಿ?

**ಉತ್ತರ** : ಶ್ರೀರಾಮನ ಅಶ್ವಮೇಧ ಕುದುರೆಯು ರಾಜ್ಯವನ್ನು ಸುತ್ತಿ ಬರುತ್ತಿರಲು ಎಲ್ಲ ರಾಜ್ಯಗಳ ಶಕ್ತಿಶಾಲಿಗಳಾದ ಮಹಾರಾಜರುಗಳು ರಾಮನ ಕುದುರೆಯೆಂಬ ಹೆಸರನ್ನು ಕೇಳಿಯೇ ಅದನ್ನು ತಡೆಯಲು ಹೆದರಿದರು. ಕುದುರೆಗೆ ನಮಿಸಿ ಬೀಳ್ಕೋಡುತ್ತಿದ್ದರು. ಹೀಗೆ ರಾಜ್ಯಗಳನ್ನು ಸಂಚರಿಸುತ್ತಾ ಬರುತ್ತಿರುವ ಸುಂದರವಾದ ಅಶ್ವಮೇಧ ಕುದುರೆಯು ವಾಲ್ಮೀಕಿ ಆಶ್ರಮದಲ್ಲಿ ಬೆಳೆದು ಹಸುರಿನ ಆಸೆಪಟ್ಟು ಆಶ್ರಮಕ್ಕೆ ಬಂದಿತು.

39. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗುತ್ತು?

**ಉತ್ತರ** : ಯಜ್ಞಾಶ್ವದ ಹಣೆಯ ಪಟ್ಟಿಯಲ್ಲಿ "ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೋರ್ವನೆ ವೀರನು. ಆತನ ಯಜ್ನದ ಕುದುರೆ ಇದು. ರಾಮನನ್ನು ಎದುರಿಸಿ ಯುದ್ದ ಮಾಡಲು ಶಕ್ತಿ ಇರುವ ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಬಹುದು". ಎಂದು ಬರೆಯಲಾಗಿತ್ತು.

40. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?

**ಉತ್ತರ** : ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾತತದ ವಾತಾವರಣವನ್ನೆಲ್ಲ ತುಂಬಿದೆ ಎಂದು ಜಾತಿ ವ್ಯೆ್ಥಯಬಗ್ಗೆ ವಿವೇಕಾನಂದರು ಅಭಿಪ್ರಾಯ ಪಟ್ಟಿದ್ದಾರೆ.

41. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

**ಉತ್ತರ** : 10–09–1892 ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ ವಿವೇಕಾನಂದರೊ" ಸ್ವಮತಾಭಿಮಾನ, ಅನ್ಯ ಮತ ದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತ್ತಿತ್ತು" ಎಂದು ಹೇಳಿದ್ದಾರೆ.

42. ವಸಂತ ಮುಖತೋರಲಿಲ್ಲ ಪದ್ಯದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**ಉತ್ತರ** : ಒಡೆಯನು ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ನಿಂತಿದೆ. ಅದರ ಮೇಲೆ ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳ ಕಲರವ ಕೇಳುತ್ತಿದೆ. ಕೋಗಿಲೆಗಳು ಅಲ್ಲಿ ಕುಳಿತು ಮನತುಂಬಿ ಹಾಡುತ್ತಿವೆ. ಕಡಲುಕ್ಕಿ ಹರಿಯುವ ಸಂಭ್ರಮ ಇಳೆಯನ್ನೆಲ್ಲಾ ಆವರಿಸಿದೆ. ಈ ರೀತಿಯಾಗಿ ಕವಿಯು ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಪ್ರಕೃತಿಯ ಸಂಭ್ರಮವನ್ನು ವ್ಯಕ್ತಪಡಿಸಿದ್ದಾರೆ.

43. ಪುಟ್ಟಿಯ ಪ್ರಶ್ನೆಗಳೇನು?

**ಉತ್ತರ** : ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಲ ಕಂಡು ಅವನು ಮರುಗಿದನೆ? ಮತ್ತೆ ಮತ್ತೆ ನೆಲವ ತಟ್ಟಿ ಪುಟ್ಟಿಯು ಪ್ರಶ್ನಿಸಿಕೊಳ್ಳುತ್ತಾಳೆ.

44. ಯಾರು ಯಾರಿಗೆ ವಸಂತ ಮುಖ ತೋರಲಿಲ್ಲ?

**ಉತ್ತರ** : ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ. ಇದರಿಂದಾಗಿ ಕಮ್ಮಾರನ ಕುಲುಮೆ ಉರಿಯಲಿಲ್ಲ. ಕುಂಬಾರನ ಕುಲಾಲಚಕ್ರ ತಿರುಗಲಿಲ್ಲ. ನೇಕರನ ಮಗ್ಗ ಉಸಿರಡಲಿಲ್ಲ. ಕೇರಿಯ ಮಾರನ ಒಲೆ ಹೊತ್ತಲಿಲ್ಲ.

45. ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ  ಎಂದು ತೋರಿಸುತ್ತಾರೆ?

**ಉತ್ತರ** : ಜಲಿಯನ್ ವಾಲಾಬಾಗ್ ಅಂತರ್ಮುಖಿಯಾಗಿ ನಿಂತ ಭಗತ್ ಸಿಂಗ್ ಅಲ್ಲಿಯ ಮಣ್ಣನ್ನು ತನ್ನ ಡಬ್ಬದಲ್ಲಿ ತುಂಬಿಕೊಂಡನು. ಮನೆಗೆ ಹಿಂತಿರುಗಿದಾಗ ಅವನ ಸಹೋದರಿ ಎಂದಿನಂತೆ ಅವರನ್ನು ಊಟಕ್ಕೆಬ್ಬಿಸಿದರೆ ಒಲ್ಲೆನೆಂದು ತಿರುಗಿಸಿದ. ಅವನಿಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ಕೂಡ ನಿರಾಕರಿಸಿ, ಅವಳನ್ನು ಮನೆಯ ಹಿಂಬಾಗಕ್ಕೆ ಕರೆದೊಯ್ದು, ತನ್ನ ಡಬ್ಬಿಯಲ್ಲಿ ಮಣ್ಣನ್ನು ತೋರಿಸಿದ. ರಕ್ತದಲ್ಲಿ ಕಲೆಸಿದಂತಿದ್ದ ಆ ಮಣ್ಣು ತ್ಯಾಗದ ಪ್ರತೀಕ ಎಂದು ತಿಳಿಯ ಹೇಳಿದ.

46. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?

**ಉತ್ತರ :** "ಏಪ್ರಿಲ್ 12, 1919 ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ದ ಹಿಂದೂ ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ" ಎಂದು ಜಲಿಯನ್ ವಾಲಾಬಾಗ್ ನಲ್ಲಿ ಒಕ್ಕಣೆ ಬರೆಯಲಾಗಿತ್ತು.

47. ಒಗಟುಗಳಿಂದ ಶೈಕ್ಷಣಿಕ ಲಾಭವೇನು?

**ಉತ್ತರ :** ಜನಪದ ಒಗಟುಗಳನ್ನು ಬಿಡಿಸುವುದರಿಂದ ಚಿಂತನಾಶಕ್ತಿ ಹೆಚ್ಚಾಗುತ್ತದೆ, ಸೃಜನಶೀಲತೆ ಬೆಳೆಯುತ್ತದೆ, ಬೌದ್ಧಿಕ ಸಾಮರ್ಥ್ಯ ಹೆಚ್ಚಾಗುತ್ತದೆ, ಮನರಂಜನೆ ಸಿಗುತ್ತದೆ. ಒಗಟುಗಳು ಜನರ ಕಲ್ಪನಾ ಚಾತುರ್ಯಕ್ಕೆ ನಿದರ್ಶನವಾಗಿವೆ.

48. ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿರಿ.

**ಉತ್ತರ :** "ಕೈಯುಂಟು ಕಾಲಿಲ್ಲ, ಶಿರಹರಿದ ಮುಂಡ ಮೈಯೊಳಗೆ ನವಗಾಯ ಒಂಬತ್ತು ತುಂಡ ಒಯ್ಯನೊಯ್ಯನೆ ಬಂದು ಹೆಗಲೇರಿಕೊಂಡ ರಾಯ ರಾಯರಿಗೆಲ್ಲ ತಾನೆ ಪ್ರಚಂಡ". ಇದು ಅಂಗಿ ಎಂಬ ಉತ್ತರ ಬರುವ ಒಗಟಿನ ಪ್ರಶ್ನೆ.

49. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?

**ಉತ್ತರ :** ಕಮಲದ ಹೂವು ಬೆಳೆಯಲು ಕೆಸರು ಬೇಕು. ಆದ್ದರಿಂದ ಕಮಲ ಕೆಸರಿನಲ್ಲೇ ಹುಟ್ಟಿ ಕೆಸರಿನಲ್ಲೇ ಬೆಳೆಯುವ ಒಂದು ವಿಧವಾದ ಗಿಡವಾಗಿದೆ.

50. ಬೀಸುವ ಕಲ್ಲನ್ನು ಕುರಿತ ಒಗಟನ್ನು ವಿವರಿಸಿ.

**ಉತ್ತರ :** "ಬಗಲಲ್ಲಿ ಕಕ್ಕುವುದು ಬಾಯಲ್ಲಿ ತಿಂಬೂದು" ಇದರ ಅರ್ಥ ಬೀಸುವ ಕಲ್ಲಿನ ಮಧ್ಯಭಾಗದಲ್ಲಿರುವ ಬಾಯಿಗೆ ಹಾಕಲಾಗುತ್ತದೆ, ಬೀಸುತ್ತಿದ್ದಂತೆ ಅದು ಕಲ್ಲಿನ ಒಳಗೆ ಹೋಗಿ, ಅದನ್ನು ಬೀಸುವಾಗ ಅದರ ಸುತ್ತಲೂ ಹಿಟ್ಟು ಬೀಳುತ್ತದೆ.

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ, ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

| ಕ್ರ ಸಂ | ಗದ್ಯ/ಪದ್ಯದ ಹೆಸರು | ಕೃತಿಕಾರರ ಹೆಸರು | ಕಾಲ | ಸ್ಥಳ | ಆಕರ ಕೃತಿ ಮತ್ತು ಇತರ ಕೃತಿಗಳು | ಪ್ರಶಸ್ತಿ / ಬಿರುದು |
|---|---|---|---|---|---|---|
| 1 | ಯುದ್ಧ | ಸಾರಾ ಅಬೂಬಕ್ಕರ್ | 1936 | ಕಾಸರಗೋಡು | ಚಪ್ಪಲಿಗಳು, ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, | ನೃಪತುಂಗ ಪ್ರಶಸ್ತಿ |
| 2 | ಶಬರಿ | ಪು.ತಿ. ನರಸಿಂಹಾಚಾರ್ಯ | 1905 | ಮಂಡ್ಯ ಜಿಲ್ಲೆಯ ಮೇಲುಕೋಟೆ | ಶಬರಿ, ಅಹಲ್ಯೆ, ರಸಸರಸ್ವತಿ, ಹಣತೆ, ಹರಿಚರಿತೆ ಇತ್ಯಾದಿ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಗೌ.ಡಿಲಿಟ್ |
| 3 | ಲಂಡನ್ ನಗರ | ಡಾ. ವಿನಾಯಕ ಕೃಷ್ಣ ಗೋಕಾಕ್ | 1909 | ಹಾವೇರಿ ಜಿಲ್ಲೆಯ ಸವಣೂರು | ಸಮುದ್ರ ಗೀತೆಗಳು, ಪಯಣ, ಉಗಮ, ಸಮರಸವೇ ಜೀವನ, ಭಾರತ ಸಿಂಧುರಶ್ಮಿ | ಗೌರವ ಡಿ.ಲಿಟ್. ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ |
| 4 | ಭಾಗ್ಯ ಶಿಲ್ಪಿಗಳು | ಡಿ.ಎಸ್. ಜಯಪ್ಪ ಗೌಡ | 1947 | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಕರ್ನಾಟಕ ಗ್ರಾಮೀಣ ಸಂಸ್ಥೆಗಳು, | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 5 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹದೇವ | 1948 | ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು | ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ, ದ್ಯಾವನೂರು. ಒಡಲಾಳ. | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |

| | | | | | | |
|---|---|---|---|---|---|---|
| 6 | ವ್ಯಾಘ್ರಗೀತೆ | ಎ. ಎನ್. ಮೂರ್ತಿರಾವ್ | 1900 | ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳು | ದೇವರು , ಹಗಲುಗನಸುಗಳು, ಅಲೆಯುವ ಮನ, ಚಂಡಮಾರುತ , ಚಿತ್ರಗಳು–ಪತ್ರಗಳು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ. |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | 1031 | ಕಿಸುಕಾಡು ನಾಡಿನ ಸಯ್ಯಡಿ | ಕೃತಿಗಳು – ಕರ್ನಾಟಕ ಪಂಚತಂತ್ರ | – |
| 8 | ಸಂಕಲ್ಪಗೀತೆ | ಜಿ. ಎಸ್. ಶಿವರುದ್ರಪ್ಪ | 1926 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | ಸಾಮಗಾನ, ಚೆಲುವು–ಒಲವು, ದೇವಶಿಲ್ಪಿ, ದೀಪದಹೆಜ್ಜೆ, ಅನಾವರಣ. ಎದೆತುಂಬಿ ಹಾಡಿದೆನು, | ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ , ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ. |
| 9 | ಹಕ್ಕಿ ಹಾರುತಿದೆ ನೋಡಿದಿರಾ | ದ. ರಾ. ಬೇಂದ್ರೆ | 1896 | ಧಾರವಾಡ | ಗರಿ, ನಾದಲೀಲೆ, ನಾಕುತಂತಿ, ಉಯ್ಯಾಲೆ ಗಂಗಾವತರಣ, ಸಖೀಗೀತ, | ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ |
| 10 | ಕೌರವೇಂದ್ರನ ಕೊಂದೆ ನೀನು | ಕುಮಾರವ್ಯಾಸ | 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ, ಐರಾವತ | ರೂಪಕಸಾಮ್ರಾಜ್ಯ ಚಕ್ರವರ್ತಿ |
| 11 | ಹಸುರು | ಕುವೆಂಪು | 1904 | ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿ. | ಪಕ್ಷಿಕಾಶಿ, ಕೊಳಲು, ಪಾಂಚಜನ್ಯ, ಜಲಗಾರ ಕಾನೂರು ಹೆಗ್ಗಡತಿ, **ಶ್ರೀರಾಮಾಯಣ ದರ್ಶನಂ,** | ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ. |
| 12 | ಛಲಮನೆ ಮೆರೆವೆಂ | ರನ್ನ | ಸುಮಾರು 949 | ಬಾಗಲಕೋಟೆ ಜಿಲ್ಲೆಯ ಮುದುವೊಳಲು | ಸಾಹಸಭೀಮ ವಿಜಯಂ (ಗದಾಯುದ್ಧ) ಅಜಿತತೀರ್ಥಂಕರ ಪುರಾಣತಿಲಕಂ, ಪರಶುರಾಮಚರಿತಂ, ಚಕ್ರೇಶ್ವರಚರಿತಂ. | ಕವಿಚಕ್ರವರ್ತಿ |
| 13 | ವೀರಲವ | ಲಕ್ಷ್ಮೀಶ | ಸುಮಾರು 1550 | ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ಣಾಟಕವಿಚೂತವನ ಚೈತ್ರ. |

**ಮಾದರಿ : ಪು. ತಿ. ನರಸಿಂಹಚಾರ್ಯ.**

ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು ಕ್ರಿ.ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರು ಶಬರಿ, ಅಹಲ್ಯೆ, ರಸಸರಸ್ವತಿ, ಹಣತೆ, ವಿಕಟಕವಿ ವಿಜಯ, ರಸಸರಸ್ವತಿ, ಗಣೇಶದರ್ಶನ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು. ಇವರ ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ.

**ಮಾದರಿ ಅಭ್ಯಾಸಕ್ಕಾಗಿ :**

ಶ್ರೀಯುತ ______________________ಅವರು ಕ್ರಿ.ಶ.__________ರಲ್ಲಿ__________________________ಎಂಬ ಊರಿನಲ್ಲಿ ಜನಿಸಿದರು. ಇವರು ______________________________________________ಕೃತಿಗಳನ್ನು ಬರೆದಿದ್ದಾರೆ. ಇವರಿಗೆ______________________________________________ಪ್ರಶಸ್ತಿ ಲಭಿಸಿವೆ.

**VI.** ಈ ಪದ್ಯಭಾಗವನ್ನು ಬರೆದುಕೊಂಡು ಪ್ರಸ್ತಾರ ಹಾಕಿ, ಗಣ ವಿಭಾಗಸಿ ಛಂದಸ್ಸಿನ ಹೆಸರು ಬರೆಯಿರಿ

| | | | |
|---|---|---|---|
| ೪ | ೪ | ೪ | |
| UU U U | – – | UUUU | = ೧೨ |
| **ಒಡೆಯಲ** | **ಜಾಂಡಂ** | **ಕುಲಗಿರಿ** | |

| | | | | | |
|---|---|---|---|---|---|
| ೪ | ೪ | ೪ | ೪ | ೪ | |
| UU – | UU – | U – U | UU – | UU – | = ೨೦ |
| **ಕೆಡೆಯಲ್** | **ನಡುಗ** | **ಲ್ಕೆಧಾತ್ರಿ** | **ದಿವಿಜರ್** | **ಸೆಡೆಯ** | |

ಛಂದಸ್ಸಿನ ಹೆಸರು : ಇದು ಮಾತ್ರಾಗಣ ಛಂದಸ್ಸಿನ **ಕಂದಪದ್ಯ** ಕ್ಕೆ ಸೇರಿದೆ.

**ಉತ್ಪಲಮಾಲಾವೃತ್ತ :**

| | | | | | | |
|---|---|---|---|---|---|---|
| ಭ | ರ | ನ | ಭ | ಭ | ರ | ಲಗು |
| –U U | – U– | UUU | – U U | – U U | – U– | U – |
| **ಚಾಗದ** | **ಭೋಗದ** | **ಕ್ಕರದ** | **ಗೇಯದ** | **ಗೊಟ್ಟಿಯ** | **ಲಂಪಿನಿಂ** | **ಪುಗ** |

**ಳ್ಗಾಗರ........**

ಛಂದಸ್ಸಿನ ಹೆಸರು : ಇದು ಅಕ್ಷರ ಗಣದ **ಉತ್ಪಲಮಾಲಾ ವೃತ್ತಕ್ಕೆ** ಸೇರಿದೆ

**ಭಾಮಿನಿ ಷಟ್ಪದಿ**

| | | | | |
|---|---|---|---|---|
| ೩ | ೪ | ೩ | ೪ | |
| – U | – UU | – U | UU UU | = ೧೪ ಮಾತ್ರೆ |
| **ಮಕ್ಕ** | **ಳೈವರೊ** | **ಳಾನು** | **ಹಿರಿಯನು** | |

| | | | | |
|---|---|---|---|---|
| ೩ | ೪ | ೩ | ೪ | |
| –U | – UU | – U | – – | = ೧೪ ಮಾತ್ರೆ |
| **ತಕ್ಕ** | **ಮಾತೆಯ** | **ಮಾತು** | **ಸಂದೇ** | |

| | | | | | | |
|---|---|---|---|---|---|---|
| ೩ | ೪ | ೩ | ೪ | ೩ | ೪ | ಗು |
| –U | UU– | UUU | UU– | U UU | UU UU | – = ೨೩ ಮಾತ್ರೆ |
| **ಹಕ್ಕೆ** | **ನೆಲೆಯಿ** | **ಲ್ಲದುನಿ** | **ಲಲಿಧಾ** | **ರುಣಿಯ** | **ಬಯಸುವ** | **ರೆ ।** |

ಛಂದಸ್ಸಿನ ಹೆಸರು : ಇದು ಮಾತ್ರಾಗಣ ಛಂದಸ್ಸಿನ **ಭಾಮಿನಿ ಷಟ್ಪಧಿ** ಗೆ ಸೇರಿದೆ.

**ವಾರ್ಧಕ ಷಟ್ಪದಿ :**

| ೫ | ೫ | ೫ | ೫ | |
|---|---|---|---|---|
| UUUUU | – U U U | UUU – | UUUU U | = ೨೦ ಮಾತ್ರೆ |
| ಸತಿಮಡಿಸಿ | ನೀಡುವೆಲೆ | ವಿಡಿದಕೈ | ಬಸವಳಿದು | |

| ೫ | ೫ | ೫ | ೫ | |
|---|---|---|---|---|
| UU – U | U UUUU | UU – U | UU U– | = ೨೦ ಮಾತ್ರೆ |
| ದತಿಚಿಂತೆ | ಯೊಳುಮಱಿದ | ತನುಜೊಮ್ಮು | ವಿಡಿದಪು | |

| ೫ | ೫ | ೫ | ೫ | ೫ | ೫ | ಗು | |
|---|---|---|---|---|---|---|---|
| U U– U | – U– | – U – | U U U U U | – – U | –UUU | – | = ೩೨ ಮಾತ್ರೆ |
| ರ್ಬತಿಭಾರ | ವಾಗಿಕ | ಣ್ಮುಚ್ಚಿತೋಳ್ | ತೊಡೆಮಿಡುಕೆ | ಸುಯ್ಸೂಸೆ | ನಿದ್ರೆಕವಿ | ದು | |

ಛಂದಸ್ಸಿನ ಹೆಸರು : ಇದು ಮಾತ್ರಾಗಣ ಛಂದಸ್ಸಿನ **ವಾರ್ಧಕ ಷಟ್ಪದಿ** ಗೆ ಸೇರಿದೆ.

**ಚಂಪಕಮಾಲಾ ವೃತ್ತ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| UUU | U – U | – U U | U – U | U – U | U – U | – U – |
| ಎನೆನ | ಸುನಕ್ಕು | ಮಾರರಿ | ಪುವಾತ | ನಧೈರ್ಯ | ಮನಾತ | ನೇಳ್ಗೆವೆ |

ತ್ತನುಗತ.....

ಛಂದಸ್ಸಿನ ಹೆಸರು : ಇದು ಅಕ್ಷರ್ರಗಣ ಛಂದಸ್ಸಿನ **ಚಂಪಕಮಾಲಾ ವೃತ್ತಕ್ಕೆ** ಗೆ ಸೇರಿದೆ.

**ಅಭ್ಯಾಸಕ್ಕಾಗಿ :**

1. ಅತಿಕುಟಿಲಮನಂ ಧನಲು
   ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

2. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

3. ಎಡದ ಮೈಯಲಿ ಕೌರವೇಂದ್ರರ
   ಗಡಣ ಬಲದಲಿ ಪಾಂಡು ತನಯರ
   ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು

4. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು।

5. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।
   ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ।
   ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರ ಹೆಸರಿಸಿ. ಲಕ್ಷಣ ಬರೆದು ಸಮನ್ವಯ ಮಾಡಿ ಬರೆಯಿರಿ.**

- **"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು."**

**ಅಲಂಕಾರ :–** ಉಪಮಾಲಂಕಾರ

ಲಕ್ಷಣ :– ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನ) ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.

**ಉಪಮೇಯ** :– ಭೀಮ ದುರ್ಯೋಧನರು

**ಉಪಮಾನ** :– ಮದಗಜಗಳು

**ಉಪಮಾವಾಚಕ** :– ಅಂತೆ

**ಸಮಾನಧರ್ಮ** :– ಹೋರಾಟ

**ಸಮನ್ವಯ :–** **'ಉಪಮೇಯ'** ವಾದ ಭೀಮ ದುರ್ಯೋಧನರನ್ನು **'ಉಪಮಾನ'** ವಾದ ಮದಗಜಗಳಿಗೆ ಹೋಲಿಸಲಾಗಿದೆ. **'ಅಂತೆ'** ಎಂಬ **'ವಾಚಕ'** ಪದವಿದ್ದು **'ಹೋರಾಟ'** ಎಂಬ **'ಸಮಾನಧರ್ಮ'** ಇರುವುದರಿಂದ ಇದನ್ನು **'ಪೂರ್ಣೋಪಮಾಲಂಕಾರ'** ಎಂದು ಹೇಳಬಹುದು.

- **"ಮಾರಿಗೌತಣವಾಯ್ತು ನಾಳಿನ ಭಾರತವು"**

**ಅಲಂಕಾರ :–** ರೂಪಕಾಲಂಕಾರ

**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು **'ರೂಪಕಾಲಂಕಾರ'**.

ಉಪಮೇಯ :– ನಾಳಿನ ಭಾರತ ಯುದ್ಧ

ಉಪಮಾನ :– ಮಾರಿಯ ಔತಣ

ಸಮನ್ವಯ :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

- **"ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ."**

**ಅಲಂಕಾರ :–** ದೃಷ್ಟಾಂತಾಲಂಕಾರ

**ಲಕ್ಷಣ** :– ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು **'ದೃಷ್ಟಾಂತಾಲಂಕಾರ'**.

ಉಪಮೇಯ :– ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ :– ಊಟ ಬಲ್ಲವನಿಗೆ ರೋಗವಿಲ್ಲ

ಸಮನ್ವಯ :– ಇಲ್ಲಿ ಉಪಮೇಯವಾದ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಇವು ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ. ಆದ್ದರಿಂದ ಇದು **'ದೃಷ್ಟಾಂತಾಲಂಕಾರ.'**

- **ಅರ್ಥಾಂತರನ್ಯಾಸ ಅಲಂಕಾರ**

**"ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

**ಅಲಂಕಾರ :–** ಅರ್ಥಾಂತರನ್ಯಾಸಾಲಂಕಾರ.

ಲಕ್ಷಣ :– ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸಾಲಂಕಾರ.**

ಉಪಮೇಯ (ವಿಶೇಷ ವಾಕ್ಯ) :– ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

ಉಪಮಾನ ( ಸಾಮಾನ್ಯ ವಾಕ್ಯ) :– ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಸಮನ್ವಯ : ಇಲ್ಲಿ ಉಪಮೇಯವಾದ **"**ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು**"** ಎಂಬ ವಿಶೇಷವಾಕ್ಯವನ್ನು ಉಪಮಾನವಾದ **"**ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದುಲೆಕ್ಕವೇ?**"** ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು **'ಅರ್ಥಾಂತರನ್ಯಾಸಾಲಂಕಾರ'**.

ಕೋಲಾರ

**ಹೆಚ್ಚಿನ ಅಭ್ಯಾಸಕ್ಕಾಗಿ :**

"ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"

"ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

"ಮಾರಿಗೌತಣವಾಯ್ತು ನಾಳಿನ ಭಾರತವು"

"ಮರವೇರಿದ ಮರ್ಕಟನಂತೆ"

"ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ"

**VIII. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಆ ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**

- **ತಾಳಿದವನು ಬಾಳಿಯಾನು.**

**ಗಾದೆಯ ಮಹತ್ವ :** ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ಚಿಕ್ಕದಾದರೂ ಅರ್ಥದಲ್ಲಿ ವಿಶಾಲವಾಗಿವೆ. ಅದರಂತೆ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

**ಅರ್ಥ ವಿವರಣೆ :** ನೂರರ ವೇಗದಲ್ಲಿ ಹೋದವನು 108 ರಲ್ಲಿ ಬರುತ್ತಾನೆ. ತಾಳ್ಮೆ ಮನುಷ್ಯನ ಮೂಲ ಸ್ವಭಾವವಾಗಬೇಕು. ತಾಳ್ಮೆಯಿಲ್ಲದವನ ಜೀವನ ಒಂದು ಕ್ಷಣದಲ್ಲಿ ಹಾಳಾಗಬಹುದು. ಅದೇ ಕ್ಷಣದಲ್ಲಿ ತಾಳ್ಮೆ ವಹಿಸಿದರೆ ಅನಾಹುತಗಳನ್ನು ತಪ್ಪಿಸಬಹುದು. ಕೋಪದಲ್ಲಿ ಕೊಯ್ದ ಮೂಗು ನಂತರದಲ್ಲಿ ಮತ್ತೆ ಸರಿಹೋಗುವುದಿಲ್ಲ. ಆದ್ದರಿಂದ ಯಾವ ಕಾರ್ಯ ಮಾಡಬೇಕಾದರೂ ತಾಳ್ಮೆ ಅವಶ್ಯಕ. ಏಕೆಂದರೆ ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಇಂದು ಅಂಕ ಏರು–ಪೇರಾದರೂ ತಾಳ್ಮೆ ಕಳೆದುಕೊಂಡ ಯುವ ಜನಾಂಗ ಆತ್ಮಹತ್ಯೆಯಂತಹ ಕೃತ್ಯಗಳಿಗೆ ಇಳಿಯುತ್ತಿರುವ ಎಷ್ಟೊಂದು ಉದಾಹರಣೆಗಳನ್ನು ನೋಡುತ್ತೇವೆ. 'ಈಸಬೇಕು ಇದ್ದು ಜಯಿಸಬೇಕು' ಎಂದು ದಾಸರೇ ಹೇಳಿದ್ದಾರೆ. ಆದ್ದರಿಂದ ಕಷ್ಟ–ಸುಖಗಳನ್ನು ಸಮಾನವಾಗಿ ಸ್ವೀಕರಿಸಿ ಬಾಳಲು ಕಲಿಯಬೇಕು.

**ಮೌಲ್ಯ :** ಸಹನೆ ಕಳೆದುಕೊಂಡು ನಿರಾಶರಾಗಿ ಬಾಳುವುದು ಅಥವಾ ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುವುದು ಉಚಿತವಲ್ಲ, ತಾಳ್ಮೆಗಿಂತ ತಪವು ಇಲ್ಲ ಎಂಬ ಸಂದೇಶವು ಈ ಗಾದೆಯಲ್ಲಿ ಅಡಕವಾಗಿದೆ.

- **ಕೈ ಕೆಸರಾದರೆ ಬಾಯಿ ಮೊಸರು**

**ಗಾದೆಯ ಮಹತ್ವ :** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಗಾದೆಗಳು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

**ಅರ್ಥ ವಿವರಣೆ :** ಕೈಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖವುಂಟು ಎಂದರ್ಥ. ಸೋಮಾರಿಯಾಗಿ ಸುಮ್ಮನೆ ಕುಳಿತುಕೊಳ್ಳಬಾರದು. ಯಾವುದಾದರೊಂದು ಕೆಲಸ ಮಾಡುವುದರಿಂದ ನಮ್ಮ ಹೊಟ್ಟೆ ತುಂಬುತ್ತದೆ. ನಮ್ಮ ಬಾಯಿ ಮೊಸರಿನ ರುಚಿ ನೋಡುವಂತಾಗುತ್ತದೆ. "ಛೀ! ಕೈ ಕೆಸರಾಗುವುದಲ್ಲಾ, ಈ ಕೆಲಸ ಮಾಡುವುದಾದರೂ ಹೇಗೆ?" ಎಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಹಣ ಸಂಪಾದನೆಯಾಗದಿದ್ದರೆ ಹೊಟ್ಟೆ ತುಂಬುವುದಿಲ್ಲ. ಜೀವನ ಸುಖವಾಗಿ ಸಾಗಬೇಕಾದರೆ ಕೈ ಕೆಸರಾಗಲೇ ಬೇಕು; ಕೈ ತುಂಬಾ ಸಂಪಾದನೆಯಾಗಲೇಬೇಕು.

**ಮೌಲ್ಯ :** ಕಷ್ಟಪಟ್ಟರೆ ಸುಖ ಉಂಟು, ದುಡಿಮೆ ಬದುಕಿನ ಜೀವನವನ್ನು ಕಟ್ಟಿಕೊಡುತ್ತದೆ ಎಂಬ ಮೌಲ್ಯವು ಈ ಗಾದೆ ಮಾತಿನಲ್ಲಿ ಅಡಕವಾಗಿದೆ.

- **ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.**

**ಗಾದೆಯ ಮಹತ್ವ :** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

**ಅರ್ಥ ವಿವರಣೆ :** ಜೀವನದಲ್ಲಿ ನಮಗೆ ಹಲವಾರು ಸೌಲಭ್ಯಗಳು ದೊರೆತು ನಾವು ಅತ್ಯುನ್ನತ ದರ್ಜೆಗೆ ಏರಲು ಸಾಧ್ಯವಾಗಬಹುದು. ಅದರಿಂದ ನಮಗೆ ಹಲವಾರು ವಿಧದ ಸುಖ ಹುಡುಕಿಕೊಂಡು ಬರಬಹುದು. ಆದರೆ ಹೆತ್ತ ತಾಯಿ ಮಡಿಲಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಯಾವುದರಿಂದಲೂ ಸಿಗುವುದಿಲ್ಲ. ಅದೇರೀತಿ ನಾವು ಜನ್ಮ ಪಡೆದ ನಾಡು ನಮಗೆ ಇಂದ್ರನ ನಂದನವಕ್ಕಿಂತಲೂ ಮಿಗಿಲಾದುದು. ಅದಕ್ಕೆ ಕಾರಣ ನಮ್ಮ ಮನಸ್ಸಿನಲ್ಲಿ ಹುದುಗಿರುವ ಮಾತೃಭೂಮಿ ಕುರಿತಾದ ಗೌರವದ ಭಾವನೆಗಳು ಸ್ವರ್ಗವನ್ನೂ ಮೀರಿದೆ ಎಂಬುದು ಈ ಗಾದೆ ಮಾತಿನ ವಿಶೇಷತೆ.

**ಮೌಲ್ಯ :** ಜನ್ಮ ನೀಡಿದ ತಾಯಿ ಮತ್ತು ನಮ್ಮನ್ನು ಹೊತ್ತು ಬೆಳಿಸಿದ ಈ ಭೂಮಿ ಸ್ವರ್ಗಕ್ಕಿಂತ ಶ್ರೇಷ್ಠವಾದುದು ಎಂಬ ಮೌಲ್ಯವು ಈ ಗಾದೆ ಮಾತಿನಲ್ಲಿ ಅಡಕವಾಗಿದೆ.

- **ದೇಶ ಸುತ್ತು ; ಕೋಶ ಓದು**

**ಗಾದೆಯ ಮಹತ್ವ :** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

**ಅರ್ಥ ವಿವರಣೆ :** ಮನುಷ್ಯನಿಗೆ ಲೋಕಜ್ಞಾನ ಬಹಳ ಮುಖ್ಯ. ಅಂದರೆ ಒಂದು ದೇಶ ಸುತ್ತುವುದರಿಂದ ಪ್ರದೇಶದ ಜನರ ಆಚಾರ, ವಿಚಾರ, ಪದ್ಧತಿ, ರೀತಿ, ನೀತಿಗಳಳ ಅರಿವಾಗುತ್ತದೆ. ನಮಗೆ ತಿಳಿಯದೇ ಇರುವ ಎಷ್ಟೋ ವಿಷಯಗಳು ತಿಳಿಯುತ್ತವೆ. ಲೋಕಸುತ್ತುವುದೇ ಒಂದು ಬಗೆಯ ಜ್ಞಾನಾರ್ಜನೆ ಎನಿಸಿದೆ. ಅದರಂತೆ ಕೋಶ ಓದುವುದು ಎಂದರೆ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು

ಅಧ್ಯಯನ ಮಾಡುವುದು, ಇಡೀ ಪ್ರಪಂಚದ ಜ್ಞಾನ ಪುಸ್ತಕಗಳಲ್ಲಿ ಅಡಗಿದೆ. ಹೀಗೆ ಅಡಕವಾಗಿರುವ ವಿಷಯಗಳನ್ನು ಓದಿ ಅದನ್ನು ಜೀವನದಲ್ಲಿ ಅನ್ವಯ ಮಾಡಿಕೊಂಡರೆ ನಮ್ಮ ಬದುಕು ಹಸನಾಗುತ್ತದೆ. ಇವೆರಡರ ಉದ್ದೇಶವು ಅಂತಿಮವಾಗಿ ಅನುಭವಗಳಿಸುವುದಾಗಿದೆ.
**ಮೌಲ್ಯ :** ದೇಶ ಸುತ್ತಿ ನೈಜ ಅನುಭವವನ್ನು ಪಡೆಯುವ ಜ್ಞಾನ ಶಾಶ್ವತವಾಗಿರುತ್ತದೆ ಎಂಬ ಶ್ರೇಷ್ಠತೆ ಈ ಗಾದೆ ಮಾತಿನಲ್ಲಿ ಅಡಕವಾಗಿದೆ.

- **ಅತಿ ಆಸೆ ಗತಿ ಕೆಡಿಸಿತು / ಹಾಸಿಗೆ ಇದ್ದಷ್ಟು ಕಾಲು ಚಾಚು**

**ಗಾದೆಯ ಮಹತ್ವ :** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.
**ಅರ್ಥ ವಿವರಣೆ :** ಮನುಷ್ಯನಿಗೆ ಆಸೆ ಇರಬೇಕು. ಆಸೆ ಮನುಷ್ಯನ ಸಹಜ ಪ್ರವೃತ್ತಿ. ಆಸೆ ಇಲ್ಲದವ ಬದುಕಲಾರ. ಆಸೆಯೇ ಉತ್ಸಾಹದ ಜನನಿ. ಅದು ಜೀವನದ ಸಂಚಾಲಕಶಕ್ತಿ. ಆಸೆಯ ಆಸರೆ ಇಲ್ಲದಿದ್ದರೆ ಮನುಷ್ಯ ಕಾಡುಪ್ರಾಣಿಯಂತೆ ಜೀವಿಸುತ್ತಿದ್ದ. ಆದರೆ ಆಸೆಯು ಹಿತಮಿತವಾಗಿರಬೇಕು. ಅತಿಯಾದ ಆಸೆ ದುಃಖಕ್ಕೆ ಮೂಲ ಎಂದು ಬುದ್ಧ ಹೇಳಿದ್ದಾನೆ. ಅತಿಯಾದರೆ ಅಮೃತವೂ ಕೂಡ ವಿಷವಾಗುತ್ತದೆ. ಅತಿಯಾಸೆಯಿಂದ ಮನುಷ್ಯ ನೆಮ್ಮದಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಪ್ರತಿದಿನ ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿಯನ್ನು ಪಡೆದ ರೈತನೊಬ್ಬನು ಒಂದೇ ಬಾರಿಗೆ ಶ್ರೀಮಂತನಾಗಬೇಕೆಂಬ ಅತಿ ಆಸೆಯಿಂದ ಕೋಳಿಯ ಹೊಟ್ಟೆಯನ್ನು ಸೀಳಿ ಒಂದೂ ಸಿಗದೆ ನಿರಾಶೆಯಾದನು. ಮುಟ್ಟಿದೆಲ್ಲಾ ಚಿನ್ನವಾಗಬೇಕೆಂದು ವರವನ್ನು ಪಡೆದ ಮೈದಾಸ ತನ್ನ ಮಗಳನ್ನು ಚಿನ್ನದ ಗೊಂಬೆಯನ್ನಾಗಿಸಿ ದುಃಖಪಡುತ್ತಾನೆ ಆಸೆಯೆಂಬುದು ಬಹಳ ಕೆಟ್ಟದ್ದು. ಮನುಷ್ಯನು ಮುಪ್ಪನಪ್ಪಿದರೂ ಆಸೆಯು ಬಿಡದು. ಹೀಗೆ ಅತಿ ಆಸೆ ಯಾರಿಗೂ ಎಂದಿಗೂ ಒಳ್ಳೆಯದಲ್ಲ. ಆದ್ದರಿಂದ ಅತಿ ಆಸೆ ಪಡಬಾರದು ಇಲ್ಲವಾದರೆ ಅತಿಆಸೆ ಗತಿಕೆಡಿಸುತ್ತದೆ.
**ಮೌಲ್ಯ :** ಅತಿ ಆಸೆ ಜೀವನ ನಾಶಕ್ಕೆ ನಾಂದಿ. ಮಿತವಾದ ಜೀವನ ಹಿತವಾದ ಜೀವನ ಎಂಬ ಮೌಲ್ಯಗಳು ಈ ಗಾದೆಯಲ್ಲಿ ಅಡಕವಾಗಿವೆ.
**ಅಭ್ಯಾಸಕ್ಕಾಗಿ :**

- ಮನಸಿದ್ದರೆ ಮಾರ್ಗ
- ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
- ಮಾಡಿದ್ದುಣ್ಣೋ ಮಹಾರಾಯ
- ಕೂಡಿ ಬಾಳಿದರೆ ಸ್ವರ್ಗಸುಖ
-

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

**1. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ದಪಡಿಸಿ"**

**ಆಯ್ಕೆ :–** ಈ ವಾಕ್ಯವನ್ನು 'ಶ್ರೀಮತಿ ಸಾರಾ ಅಬೂಬಕ್ಕರ್' ಅವರು ರಚಿಸಿರುವ **'ಚಪ್ಪಲಿಗಳು'** ಕಥಾ ಸಂಕಲನದಿಂದ ಆಯ್ದ **'ಯುದ್ಧ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮುದುಕಿಯ ಸೊಸೆಗೆ ಹೆರಿಗೆಯ ನೋವು ಬಂದಿತ್ತು ಆದರೆ ಯುದ್ಧದ ಸಂದರ್ಭವಾದ್ದರಿಂದ ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನು ಕರೆತರಲಾಗುತ್ತಿರಲಿಲ್ಲ. ರಾಹಿಲನು ತಾನು ಡಾಕ್ಟರ್ ಎಂದು ಹೇಳಿದಾಗ ಅವಳು ಆತನನ್ನು ತನ್ನ ಸೊಸೆಯ ಹತ್ತಿರ ಕರೆದು ಕೊಂಡು ಹೋದಳು. ಆಗ ರಾಹಿಲನು **"ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."** ಎಂದು ಮುದುಕಿಗೆ ಹೇಳಿದನು.

**ಸ್ವಾರಸ್ಯ :–** ಯುದ್ಧದ ಸಂದರ್ಭದಲ್ಲಿ ವೈರಿ–ಮಿತ್ರವೆಂಬ ಭೇದವನ್ನು ಮರೆತು ಹೆರಿಗೆಗೆ ಸಿದ್ದಗೊಂಡಿರುವ ಮಹಿಳೆಯನ್ನು ಪರೀಕ್ಷಿಸಿ ಹೆರಿಗೆಯನ್ನು ಮಾಡಿಸುವ ಮಾನವೀಯತೆ ಸ್ವಾರಸ್ಯವಾಗಿದೆ.

**2. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"**

**ಆಯ್ಕೆ :–** ಈ ವಾಕ್ಯವನ್ನು ಶ್ರೀಮತಿ ಸಾರಾ ಅಬೂಬಕ್ಕರ್ ಅವರು ರಚಿಸಿರುವ **'ಚಪ್ಪಲಿಗಳು'** ಎಂಬ ಕಥಾಸಂಕಲನದಿಂದ ಆಯ್ದ ಯುದ್ಧ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಯುದ್ಧದ ಸಂಬರ್ಭದಲ್ಲಿ ವಿಮಾನದ ಸ್ಫೋಟದಿಂದ ರಾಹಿಲನ ಒಂದು ಕಾಲು ಗಾಯಗೊಂಡು ನೀರಿನಲ್ಲಿ ಈಜುವಾಗ ಮಿಂಚಿನ ಬೆಳಕಿನಿಂದ ಡದ ಸೇರಿದನು. ನಂತರ ನಡೆಯಲು ಬಾರದೆ ಇರುವಾಗ ಮತ್ತೊಂದು ಮಿಂಚಿನ ಬೆಳಕಿನಿಂದ ಒಂದು ಒಂಟಿ ಮನೆ ಕಾಣಿಸಿತು. ಆಗ ತೆವಳುತ್ತ ಆ ಮನೆಯ ಬಾಗಿಲ ಹತ್ತಿರ ಹೋಗಿ ಆ ಮನೆಯಲ್ಲಿನ ಹಿರಿಯ ಮಹಿಳೆಗೆ **"ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"** ಎಂದು ಡಾಕ್ಟರ್ ರಾಹಿಲ್ ಹೇಳಿದನು.

**ಸ್ವಾರಸ್ಯ :–** ಯುದ್ಧದ ಸಂದರ್ಭದಲ್ಲಿ ಗಾಯಗೊಂಡಿರುವ ವ್ಯಕ್ತಿಯು ಜಾತಿ, ಧರ್ಮ, ದೇಶ, ಜನಾಂಗ, ವೈರಿ–ಮಿತ್ರ ವೆಂಬ ಭೇದವನ್ನು ಮರೆತು ರಕ್ಷಣೆಗಾಗಿ ಇನ್ನೊಬ್ಬರ ಸಹಾಯವನ್ನು ಕೇಳುವ ದಯನೀಯ ಸ್ಥಿತಿಯೇ ಇಲ್ಲಿನ ಸ್ವಾರಸ್ಯವಾಗಿದೆ.

**3. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"**

**ಆಯ್ಕೆ :–** ಈ ವಾಕ್ಯವನ್ನು ಶ್ರೀಮತಿ ಸಾರಾ ಅಬೂಬಕ್ಕರ್ ಅವರು ರಚಿಸಿರುವ **'ಚಪ್ಪಲಿಗಳು'** ಎಂಬ ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಯುದ್ಧದ ಸಂದರ್ಭದಲ್ಲಿ ಒಂದು ವಿಮಾನವನ್ನು ಶತ್ರು ದೇಶದವರು ಹೊಡೆದುರುಳಿಸಿದಾಗ ಅದರಲ್ಲಿನ ವೈರಿ ಪಡೆಯವರು ಬದುಕಿ ಉಳಿದಿರುವರೇ ಎಂದು ಸೈನಿಕರು ಮನೆಯಲ್ಲಿ ಪರಿಶೀಲಿಸುವಾಗ ಮುದುಕಿಯು ಸೈನಿಕರಿಗೆ **"ನನ್ನ ಮೊಮ್ಮಗುವಿನ**

**ಹೆಣವಿದೆ ಅಲ್ಲಿ; ಅದನ್ನೂ ನೋಡಿ!"** ಎಂದು ಹೇಳಿದಳು.

**ಸ್ವಾರಸ್ಯ :–** ಎರಡು ದೇಶಗಳ ನಡುವಿನ ಯುದ್ಧ ಅನೇಕ ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತದೆ. ಯುದ್ಧದಿಂದ ಸಾಮಾನ್ಯ ಜನರು ಮತ್ತು ಅವರ ಕುಟುಂಬದವರು ಬಲಿಯಾಗುತ್ತಾರೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**4. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"**

**ಆಯ್ಕೆ :–** ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ **"ಶಬರಿ"** ಗೀತನಾಟಕದಿಂದ ಆಯ್ದ **"ಶಬರಿ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಮತಂಗಾಶ್ರಮವನ್ನು ಪ್ರವೇಶಿಸಿದ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನ ಹಾಗೆ "ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವುದೆ?" ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

**5. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"**

**ಆಯ್ಕೆ :–** ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ **"ಶಬರಿ"** ಗೀತನಾಟಕದಿಂದ ಆಯ್ದ **"ಶಬರಿ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದು ಹೇಳುವ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.

**ಸ್ವಾರಸ್ಯ :–** "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

**6. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."**

**ಆಯ್ಕೆ :–** ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ **"ಶಬರಿ"** ಗೀತನಾಟಕದಿಂದ ಆಯ್ದ **"ಶಬರಿ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** **"ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ"** ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

**7. "ರಾಮ ಬಾರದೇ । ನನಗೇನು ತೋರದೇ"**

**ಆಯ್ಕೆ :–** ಈ ವಾಕ್ಯವನ್ನು ಪು. ತಿ. ನರಸಿಂಹಾಚಾರ್ ಅವರು ರಚಿಸಿರುವ **"ಶಬರಿ"** ಗೀತನಾಟಕದಿಂದ ಆಯ್ದ **"ಶಬರಿ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ರಾಮನ ದರ್ಶನಕ್ಕಾಗಿ ಹಗಲಿರುಳೂ ಭಕ್ತಿಭಾವದಿಂದ ಪರಿತಪಿಸುತ್ತಿದ್ದ ಶಬರಿಯು ರಾಮನ ಬರುವ ನಿರೀಕ್ಷೆಯಲ್ಲಿ ಎದುರು ನೋಡುತ್ತಾ ಹೂ, ಹಣ್ಣು, ಹಂಪಲಗಳನ್ನು ಸಂಗ್ರಹಿಸುತ್ತಾ ಶಬರಿಯು ಈ ರೀತಿ ಹಾಡುತ್ತಾಳೆ.

**ಸ್ವಾರಸ್ಯ :–** ರಾಮನ ದರ್ಶನವಾಗದೆ ಇದ್ದರೆ ಶಬರಿಯ ಜೀವನವು ಸಾರ್ಥಕವಾಗುವುದಿಲ್ಲ, ತನ್ನ ಬಾಳೆಲ್ಲಾ ಕತ್ತಲು ಎಂಬ ಶಬರಿಯ ರಾಮಭಕ್ತಿಯು ಬಹುಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**8. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"**

**ಆಯ್ಕೆ :–** ಈ ವಾಕ್ಯವನ್ನು ವಿ. ಕೃ. ಗೋಕಾಕ್ ಅವರು ರಚಿಸಿರುವ **"ಸಮುದ್ರದಾಚೆಯಿಂದ"** ಎಂಬ ಪ್ರವಾಸ ಕಥನದಿಂದ ಆಯ್ದ **"ಲಂಡನ್‌ನಗರ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಲೇಖಕರು ಲಂಡನ್ ನಗರದ ಬೀದಿಬೀದಿಯಲ್ಲೂ ಇತಿಹಾಸ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ನೋಡಿ ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈಯೆತ್ತಿ **"ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"** ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

**ಸ್ವಾರಸ್ಯ :–** ರಾಷ್ಟ್ರಕ್ಕಾಗಿ ದುಡಿದ ಮಹನೀಯರಿಗೆ ಲಂಡನ್ ನಗರದಲ್ಲಿ ಅಲ್ಲಿನ ಜನ ತೋರಿಸಿರುವ ಗೌರವ ಭಾವನೆ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**9. "ಹೊತ್ತು ! ಹೊತ್ತು ! ಹೊತ್ತೇ ಹಣ."**

**ಆಯ್ಕೆ :–** ಈ ವಾಕ್ಯವನ್ನು ವಿ. ಕೃ. ಗೋಕಾಕ್ ಅವರು ರಚಿಸಿರುವ **"ಸಮುದ್ರದಾಚೆಯಿಂದ"** ಎಂಬ ಪ್ರವಾಸ ಕಥನದಿಂದ ಆಯ್ದ **"ಲಂಡನ್‌ನಗರ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಲಂಡನ್ ನಗರದ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ಅವಸರದಿಂದ ಓಡಾಡುತ್ತಿರುವುದನ್ನು ನೋಡಿ (ಹೊತ್ತು! ಹೊತ್ತು! ಹೊತ್ತೇ ಹಣ) ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

**ಸ್ವಾರಸ್ಯ :–** ಸಮಯಕ್ಕೆ ಬಹಳ ಪ್ರಾಮುಖ್ಯತೆ ಇದೆ. ಅದರಲ್ಲೂ ವಿದೇಶಗಳಲ್ಲೂ ಸಮಯವೇ ಹಣ ಎಂಬ ಮಾತು ಅಕ್ಷರಶಃ ನಿಜವಾಗಿದೆ ಎಂಬ ಮಾತು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**10. "ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ"**

**ಆಯ್ಕೆ :–** ಈ ವಾಕ್ಯವನ್ನು ವಿ. ಕೃ. ಗೋಕಾಕ್ ಅವರು ರಚಿಸಿರುವ **"ಸಮುದ್ರದಾಚೆಯಿಂದ"** ಎಂಬ ಪ್ರವಾಸ ಕಥನದಿಂದ ಆಯ್ದ **"ಲಂಡನ್‌ನಗರ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಲಂಡನ್ ನಗರದ ವಿವಿಧ ಕ್ಷೇತ್ರಗಳಲ್ಲಿ ಬಹುತೇಕ ಹೆಣ್ಣು ಮಕ್ಕಳು ದುಡಿಯುತ್ತಿರುವ, ಸೇವೆ ಸಲ್ಲಿಸುತ್ತಿರುವ ಸಂದರ್ಭವನ್ನು ಗಮನಿಸಿದ ಲೇಖಕರು **"ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ"** ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

**ಸ್ವಾರಸ್ಯ :–** ಲಂಡನ್ ನಗರದಲ್ಲಿ ಹೆಣ್ಣಿಗೆ ನೀಡಿರುವ ಗೌರವ, ಸಮಾನತೆ, ಸಂಸ್ಕೃತಿ, ಪ್ರೀತಿ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**11. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."**

**ಆಯ್ಕೆ :–** ಈ ವಾಕ್ಯವನ್ನು ವಿ. ಕೃ. ಗೋಕಾಕ್ ಅವರು ರಚಿಸಿರುವ **"ಸಮುದ್ರದಾಚೆಯಿಂದ"** ಎಂಬ ಪ್ರವಾಸ ಕಥನದಿಂದ ಆಯ್ದ **"ಲಂಡನ್‌ನಗರ"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಲಂಡನ್ ನಗರ ಪ್ರವಾಸ ಕಥನದ ಕೊನೆಯಲ್ಲಿ ಪ್ರವಾಸದ ಶೈಕ್ಷಣಿಕ ಮಹತ್ವವನ್ನು ತಿಳಿಸುವ ಸಂದರ್ಭದಲ್ಲಿ ಪ್ರವಾಸದಿಂದ ತಮ್ಮ ಮನಸ್ಸು ವಿಕಾಸ ಹೊಂದಿ, ದೃಷ್ಟಿಕೋನ ವಿಶಾಲವಾದ ಬಗ್ಗೆ ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ ಎಂದು ಬೇಕನ್ ಹೇಳಿದ ಮಾತನ್ನು ಇಲ್ಲಿ ಲೇಖಕರು ಉದಾಹರಿಸಿದ್ದಾರೆ.

**ಸ್ವಾರಸ್ಯ :–** **"ದೇಶ ಸುತ್ತು : ಕೋಶ ಓದು"** ಎಂಬ ಮಾತಿನಂತೆ ಪರಿಪೂರ್ಣ ಶಿಕ್ಷಣಕ್ಕೆ ಪ್ರವಾಸ ಅತಿ ಮುಖ್ಯ. ಆದ್ದರಿಂದ ಈ ಪ್ರವಾಸದ ಮಹತ್ವ ತಿಳಿಸುತ್ತದೆ.

**12. ''ಸಾಮಾಜಿಕ ಕಾನೂನುಗಳ ಹರಿಕಾರ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ **"ದಿವಾನ್‌ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು"** ಎಂಬ ಪ್ರವಾಸ ಕಥನದಿಂದ ಆಯ್ದ **"ಭಾಗ್ಯಶಿಲ್ಪಿಗಳು"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣ ಮಾಡಿದರು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. **"ಸಾಮಾಜಿಕ ಕಾನೂನುಗಳ ಹರಿಕಾರ"** ಎಂದು ಹೆಸರಾದರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು.

**ಸ್ವಾರಸ್ಯ :–** ಸ್ವತಃ ರಾಜರಾಗಿ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ತಂದು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದ ಒಡೆಯರಿಗೆ ಈ ಬಿರುದು ನೀಡಿರುವುದು ಒಪ್ಪುವಂತದ್ದಾಗಿದೆ.

**13. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ **"ದಿವಾನ್‌ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು"** ಎಂಬ ಪ್ರವಾಸ ಕಥನದಿಂದ ಆಯ್ದ **"ಭಾಗ್ಯಶಿಲ್ಪಿಗಳು"** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಕಂಕಣಬದ್ಧರಾದರು. ಇವರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನಕ್ಕೆ **'ಮಾದರಿ ಮೈಸೂರು'** ಎಂಬ ಕೀರ್ತಿ ಒಪ್ಪುವಂತಾದ್ದಾಗಿದೆ.

**ಸ್ವಾರಸ್ಯ :–** ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಅವಧಿಯಲ್ಲಿ ಕೈಗೊಂಡ ಸಾಮಾಜಿಕ ಅಭಿವೃದ್ಧಿಯ ಕಾರ್ಯಗಳ ಸಾಧನೆಗೆ ಮಾದರಿ ಮೈಸೂರು ಎಂಬ ಕೀರ್ತಿ ಒಪ್ಪುವಂತದ್ದಾಗಿದೆ.

**14. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಕೃತಿಯಿಂದ ಆಯ್ದ **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ತ್ರೀಯರಿಗೂ ಸಮಾನವಾದ ಅವಕಾಶಗಳು ಇದ್ದವು ಎಂದು ಲೇಖಕರು ಈ ಮೇಲಿನಂತೆ ಹೇಳುತ್ತಾರೆ.

**ಸ್ವಾರಸ್ಯ :–** ಸ್ತ್ರೀಯರಿಗೂ ಸಹ ಸರಿಸಮಾನವಾದ ಸ್ಥಾನಮಾನಗಳು ಒಡೆಯರ ಕಾಲದಲ್ಲಿ ಇದ್ದವು ಎಂಬ ಸಾಮಾಜಿಕ ಸಮಾನತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**15. "ಕೈಗಾರಿಕೀಕರಣ ಇಲ್ಲವೆ ಅವನತಿ"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಕೃತಿಯಿಂದ ಆಯ್ದ **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ವಿಶ್ವೇಶ್ವರಯ್ಯ ಬಡತನ ನಿರ್ಮೂಲನೆ ಮಾಡಿ, ಆರ್ಥಿಕ ಅಭಿವೃದ್ಧಿಗೆ ಬುನಾದಿ ಹಾಕಲು ಕೈಗಾರಿಕೆಗಳಿಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. **"ಕೈಗಾರಿಕೀಕರಣ ಇಲ್ಲವೆ ಅವನತಿ"** ಎಂಬ ಘೋಷಣೆ ಮಾಡಿದರು.

**ಸ್ವಾರಸ್ಯ :–** ಕೈಗಾರಿಕೆಗಳಿಗೆ ಉತ್ತೇಜನ, ಬಡತನದ ನಿರ್ಮೂಲನ ಎಂಬಂತೆ ವಿಶ್ವೇಶ್ವರಯ್ಯನವರ ಆರ್ಥಿಕಾಭಿವೃದ್ಧಿಯ ದೂರದೃಷ್ಟಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**16. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದಾಗ, ಒಬ್ಬನ ಮೈಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.

**ಸ್ವಾರಸ್ಯ :–** ತನ್ನ ಭಕ್ತರಿಗೆ ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

**17. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯನ್ನು ಉದಾಹರಣೆ ನೀಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**18. "ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ದೇವನೂರು ಮಹಾದೇವ ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಲೇಖಕರು ವಚನಕಾರರ ಪ್ರಕಾರ ದೇವರೆಂದರೆ ಏನು ಎಂದು ಹೇಳುವ ಸಂದರ್ಭದಲ್ಲಿ ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದು ಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಸಾಧ್ಯವಿಲ್ಲ. ಆದ್ದರಿಂದ ವಚನಕಾರರು ಬೆಂಕಿಯಂತಹ ಪ್ರಜ್ಞೆಯನ್ನೇ ಪ್ರಮಾಣವಾಗಿಸಿಕೊಂಡು ಸತ್ಯಕ್ಕೆ ಆದ್ಯತೆ ನೀಡಿದರು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**19. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ **'ಸಮಗ್ರ ಲಲಿತ ಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** **"ಸಂಕಟ ಬಂದಾಗ ವೆಂಕಟರಮಣ"** ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ.

**20. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ **'ಸಮಗ್ರ ಲಲಿತ ಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಶಾನುಭೋಗರು ಹುಲಿಯ ಆಕ್ರಮಣದಿಂದ ಹೆದರಿ, ಮರ ಹತ್ತಲು ಓಡುವಾಗ ಕಲ್ಲನ್ನು ಎಡವಿ ಬಿದ್ದು, ಪ್ರಜ್ಞೆ ತಪ್ಪಿದಾಗ, ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ?" ಎಂಬ ಸಮಸ್ಯೆಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

**21. "ಹುಲಿ ಈಗ ಎಷ್ಟು ಹಸಿದಿರಬೇಕು."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವ ಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿಯು ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

**22. "ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ,"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಎ. ಎನ್. ಮೂರ್ತಿರಾವ್ ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಶಾನುಭೋಗರು ಹುಲಿಯಿಂದ ಜೀವ ಸಹಿತ ತಪ್ಪಿಸಿಕೊಳ್ಳಲು ಹೋರಾಟ ಮಾಡುತ್ತಿರುವಾಗ "ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ," ಎಂದು ನಿಶ್ಚಯಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಜೀವನ್ಮರಣದ ಹೋರಾಟದ ಸಂದರ್ಭದಲ್ಲಿಯೂ ಕೂಡ ಶಾನುಭೋಗರ ಧೈರ್ಯ, ಸಾಹಸ, ಛಲ ಬಹಳ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

**23. "ಪೊನ್ನನೆಲ್ಲಮಂ ನೀನೆ ಕೊಂಡೆ"**

**ಆಯ್ಕೆ :–** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು **"ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ"** ಎಂದು ಜೊತೆಯಲ್ಲಿ ಕರೆದುಕೊಂಡು ಹೋಗಿ, ಹೂತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ದುಷ್ಟಬುದ್ಧಿಯು ಇನ್ನು ಮಾತನಾಡದಿದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, **"ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ"** ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**24. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"**

**ಆಯ್ಕೆ :–** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **"ವೃಕ್ಷಸಾಕ್ಷಿ"** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ದರ್ಮದ ಹಾದಿಯನ್ನು ಬಿಟ್ಟು **"ಧರ್ಮಬುದ್ಧಿಯೇ ಹೊನ್ನನ್ನು ತೆಗೆದುಕೊಂಡನೆಂದು"** ನುಡಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಪಾಪಕರ್ಮನಾದ ದುಷ್ಟಮಗನ ಮಾತನ್ನು ಕೇಳಿ ತಂದೆಯು ತೊಂದರೆಗೆ ಒಳಗಾದನು ಎಂಬುದನ್ನು 'ಪ್ರಕೃತಿ ವಿಕೃತಿಯಾದರೆ ಮನುಷ್ಯನ ಆಯುಷ್ಯವು ಕಡಿಮೆಯಾಗುತ್ತದೆ' ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವರ್ಣಿಸಲ್ಪಟ್ಟಿದೆ.

**25. "ಹುಸಿಯದ ಬೇಹಾರಿಯೇ ಇಲ್ಲ."**

**ಆಯ್ಕೆ :–** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **"ವೃಕ್ಷಸಾಕ್ಷಿ"** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಧರ್ಮಬುದ್ಧಿಯು ಆಲದಮರದ ಬಳಿ ಬಂದು ನೋಡಿ, ಮರವನ್ನು ಸುತ್ತುಹಾಕಿ, ದೊಡ್ಡದಾದ ಪೊಟರೆಯನ್ನು, ಮನುಷ್ಯ ಸಂಚಾರವಾಗಿರುವುದನ್ನು ಕಂಡು ನಿಶ್ಚಯಿಸಿದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ವ್ಯಾಪಾರಿ ವೃತ್ತಿಧರ್ಮದಲ್ಲಿ ಧರ್ಮಬುದ್ಧಿಯು ಅಧರ್ಮಬುದ್ಧಿಯಾಗಿ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**26. "ಪ್ರೀತಿಯ ಹಣತೆಯ ಹಚ್ಚೋಣ."**

**ಆಯ್ಕೆ :–** ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ **"ಎದೆತುಂಬಿ ಹಾಡಿದೆನು"** ಕವನ ಸಂಕಲನದಿಂದ ಆಯ್ದ **"ಸಂಕಲ್ಪಗೀತೆ"** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**27. "ಮುಂಗಾರಿನ ಮಳೆಯಾಗೋಣ."**

**ಆಯ್ಕೆ :–** ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ **"ಎದೆತುಂಬಿ ಹಾಡಿದೆನು"** ಕವನ ಸಂಕಲನದಿಂದ ಆಯ್ದ **"ಸಂಕಲ್ಪಗೀತೆ"** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**28. "ಹೊಸ ಭರವಸೆಗಳ ಕಟ್ಟೋಣ."**

**ಆಯ್ಕೆ :–** ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ **"ಎದೆತುಂಬಿ ಹಾಡಿದೆನು"** ಕವನ ಸಂಕಲನದಿಂದ ಆಯ್ದ **"ಸಂಕಲ್ಪಗೀತೆ"** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**29. "ಹೊಸ ಎಚ್ಚರದೊಳು ಬದುಕೋಣ."**

**ಆಯ್ಕೆ :–** ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ **"ಎದೆತುಂಬಿ ಹಾಡಿದೆನು"** ಕವನ ಸಂಕಲನದಿಂದ ಆಯ್ದ **"ಸಂಕಲ್ಪಗೀತೆ"** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**30. "ಸಾರ್ವಭೌಮರಾ ನೆತ್ತಿಯ ಕುಕ್ಕಿ"**

**ಆಯ್ಕೆ :–** ಈ ವಾಕ್ಯವನ್ನು **"ಅಂಬಿಕಾತನಯದತ್ತ"** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ **"ಗರಿ"** ಕವನ ಸಂಕಲನದಿಂದ ಆಯ್ದ **"ಹಕ್ಕಿ ಹಾರುತಿದೆ ನೋಡಿದಿರಾ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**31. "ಹೊಸಗಾಲದ ಹಸುಮಕ್ಕಳ ಹರಸಿ"**

**ಆಯ್ಕೆ :–** ಈ ವಾಕ್ಯವನ್ನು **"ಅಂಬಿಕಾತನಯದತ್ತ"** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ **"ಗರಿ"** ಕವನ ಸಂಕಲನದಿಂದ ಆಯ್ದ **"ಹಕ್ಕಿ ಹಾರುತಿದೆ ನೋಡಿದಿರಾ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭಹಾರೈಸುತ್ತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**32. "ಮಂಗಳ ಲೋಕದ ಅಂಗಳಕೇರಿ"**

**ಆಯ್ಕೆ :–** ಈ ವಾಕ್ಯವನ್ನು **"ಅಂಬಿಕಾತನಯದತ್ತ"** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ **"ಗರಿ"** ಕವನ ಸಂಕಲನದಿಂದ ಆಯ್ದ **"ಹಕ್ಕಿ ಹಾರುತಿದೆ ನೋಡಿದಿರಾ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕವಿ ದ. ರಾ, ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತಾ; ಕಾಲ ಪಕ್ಷಿಯು ನಕ್ಷತ್ರಗಳನ್ನು ಮೀರಿ; ಚಂದ್ರಲೋಕದ ನೀರನ್ನು ಹೀರಿ; ಆಟವಾಡಲು ಹಾರಾಡಲು ಮಂಗಳಲೋಕದ ಅಂಗಳಕ್ಕೇರಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ವೇಗದ ಕಾಲಗತಿಯಲ್ಲಿ ಮಾನವನು ವೈಜ್ಞಾನಿಕವಾಗಿ ಮುಂದುವರೆಯುತ್ತಾ ಚಂದ್ರ, ಮಂಗಳ ಗ್ರಹ ಮುಂತಾದ ಕಾಯಗಳೆಡೆಗೆ ಹಾರುತ್ತಿರುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**33. “ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ”**

**ಆಯ್ಕೆ :–** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ **“ಕನ್ನಡ ಜನಪದ ಗೀತೆಗಳು”** ಕೃತಿಯಿಂದ ಆಯ್ದ **“ಹಲಗಲಿಯ ಬೇಡರು”** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :–** “ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು” ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**34. “ಜೀವ ಸತ್ತು ಹೋಗುವುದು ಗೊತ್ತ”**

**ಆಯ್ಕೆ :–** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ **“ಕನ್ನಡ ಜನಪದ ಗೀತೆಗಳು”** ಕೃತಿಯಿಂದ ಆಯ್ದ **“ಹಲಗಲಿಯ ಬೇಡರು”** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :–** ಬಿಟ್ರಿಷರು ನಿಶ್ಶಸ್ತ್ರೀಕರಣದ ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಹಲಗಲಿಯ ಬೇಡರು “ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು” ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**35. “ರವಿಸುತನ ಕಿವಿಯಲಿ ಬಿತ್ತಿದನು ಭಯವ.”**

**ಆಯ್ಕೆ :–** ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ **“ಕರ್ಣಾಟ ಭಾರತ ಕಥಾಮಂಜರಿ”** ಎಂಬ ಮಹಾಕಾವ್ಯದಿಂದ ಆಯ್ದ **“ಕೌರವೇಂದ್ರನ ಕೊಂದೆ ನೀನು”** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

**ಸ್ವಾರಸ್ಯ :–** “ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು, ಮನದಲ್ಲಿ ನಡೆದುದರ ಅರಿವಿಲ್ಲ” ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**36. “ಬಾಯ್ದಂಬುಲಕೆ ಕೈಯಾನುವರೆ.”**

**ಆಯ್ಕೆ :–** ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ **“ಕರ್ಣಾಟ ಭಾರತ ಕಥಾಮಂಜರಿ”** ಎಂಬ ಮಹಾಕಾವ್ಯದಿಂದ ಆಯ್ದ **“ಕೌರವೇಂದ್ರನ ಕೊಂದೆ ನೀನು”** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** “ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ” ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

**37. “ಜೀಯ ಹಸಾದವೆಂಬುದು ಕಷ್ಟ”**

**ಆಯ್ಕೆ :–** ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ **“ಕರ್ಣಾಟ ಭಾರತ ಕಥಾಮಂಜರಿ”** ಎಂಬ ಮಹಾಕಾವ್ಯದಿಂದ ಆಯ್ದ **“ಕೌರವೇಂದ್ರನ ಕೊಂದೆ ನೀನು”** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** “ಕರ್ಣ ನಿನ್ನ ಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಹಸಾದವೆಂಬುದು ಕಷ್ಟವಾಗುವುದಿಲ್ಲವೇ?” ಎಂದು ಕೃಷ್ಣನು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**38. “ಮಾರಿಗೌತಣವಾಯ್ತು ನಾಳಿನ ಭಾರತವು.”**

**ಆಯ್ಕೆ :–** ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ **“ಕರ್ಣಾಟ ಭಾರತ ಕಥಾಮಂಜರಿ”** ಎಂಬ ಮಹಾಕಾವ್ಯದಿಂದ ಆಯ್ದ **“ಕೌರವೇಂದ್ರನ ಕೊಂದೆ ನೀನು”** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**39. “ಹಸುರಾದುದು ಕವಿಯಾತ್ಮಂ”**

**ಆಯ್ಕೆ :–** ಈ ವಾಕ್ಯವನ್ನು ಕುವೆಂಪು ಅವರ **“ಪಕ್ಷಿಕಾಶಿ”** ಕವನ ಸಂಕಲನದಿಂದ ಆರಿಸಲಾಗಿರುವ **“ಹಸುರು”** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :–** ನವರಾತ್ರಿಯ ನವಧಾತ್ರಿಯ ಈ ಶ್ಯಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿತು, ರಸಪಾನದಲ್ಲಿ ಮಿಂದಿತು ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ **‘ಕವಿಶೈಲ’** ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ.

**ಸ್ವಾರಸ್ಯ :–** ನವರಾತ್ರಿಯ ಕಪ್ಪು ಕಡಲಿನಲ್ಲೂ ಹಸುರನ್ನು ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸಾಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**40. “ಬೇರೆ ಬಣ್ಣವನೆ ಕಾಣೆ”**

**ಆಯ್ಕೆ :–** ಈ ವಾಕ್ಯವನ್ನು ಕುವೆಂಪು ಅವರ **“ಪಕ್ಷಿಕಾಶಿ”** ಕವನ ಸಂಕಲನದಿಂದ ಆರಿಸಲಾಗಿರುವ **“ಹಸುರು”** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :–** ಅಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯ ಹಸುರಿನಿಂದ ಮೈಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ :–** ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ “ಬೇರೆ ಬಣ್ಣಗಳೇ ಕಾಣದಾದವು” ಎಂದು ಹೇಳಿರುವಲ್ಲಿ ಅವರ ರಸಸ್ವಾದನೆಯ ಔನ್ನತ್ಯವನ್ನು ಪೂರ್ಣವಾಗಿ ಅಭಿವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ

**41. “ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್”**

**ಆಯ್ಕೆ :–** ಈ ವಾಕ್ಯವನ್ನು ಕುವೆಂಪು ಅವರ **“ಪಕ್ಷಿಕಾಶಿ”** ಕವನ ಸಂಕಲನದಿಂದ ಆರಿಸಲಾಗಿರುವ **“ಹಸುರು”** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :–** ಅತ್ತ–ಇತ್ತ–ಎತ್ತಲೂ ಹಸುರೇ ಆವರಿಸಿರುವುದನ್ನು ಕವಿ ದೃಷ್ಟಿಯಿಂದ ನೋಡಿದ ಕುವೆಂಪು ಅವರು ‘ಕಡಲಿನಲ್ಲಿ ಎಲ್ಲೆಲ್ಲೂ ಹಸುರೇ ಹಸುರು. ಕವಿಯ ಆತ್ಮ ಹಸುರು ನೆತ್ತರಿನಿಂದ ಹಸುರುಗಟ್ಟಿತು’ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಎಲ್ಲೆಲ್ಲೂ ಹಸುರನ್ನು ಕಂಡ ಕವಿಯಾತ್ಮವು ಹಸುರುಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರೇ! ಎಂದು ವರ್ಣಿಸಿದ್ದಾರೆ.

**ಸ್ವಾರಸ್ಯ :–** ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ. ಪ್ರಕೃತಿಗಷ್ಟೇ ಅಲ್ಲದೆ ರಕ್ತದಲ್ಲೂ ಹಸುರು ವ್ಯಾಪಿಸಿದೆ ಎಂದು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

**42. “ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ”**

**ಆಯ್ಕೆ :–** ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ **“ಸಾಹಸ ಭೀಮ ವಿಜಯ”** ಎಂಬ ಕೃತಿಯಿಂದ ಆರಿಸಲಾಗಿರುವ **“ಛಲಮನೆ ಮೆಱೆವೆಂ”** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಭೀಷ್ಮಾಚಾರ್ಯರು “ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೋ ” ಎಂದು ಹೇಳಿದಾಗ ದುರ್ಯೋಧನ “ಅಜ್ಜಾ, ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ” ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ದುರ್ಯೋಧನನು ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನ ಗುಣ. ಸಂಧಿ ಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**43. “ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ.”**

**ಆಯ್ಕೆ :–** ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ **“ಸಾಹಸ ಭೀಮ ವಿಜಯ”** ಎಂಬ ಕೃತಿಯಿಂದ ಆರಿಸಲಾಗಿರುವ **“ಛಲಮನೆ ಮೆಱೆವೆಂ”** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಭೀಷ್ಮಾಚಾರ್ಯರು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿದ್ದಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು. ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು “ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ? ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** “ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ” ಎಂದು ಹೇಳುವ ದುರ್ಯೋಧನನ ಮಾತಿನಲ್ಲಿ “ಸಂಧಿಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ” ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**44. "ಪಾಂಡವರೊಳಿಜೆದು ಛಲಮನೆ ಮೆರೆವೆಂ."**

**ಆಯ್ಕೆ :–** ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ **"ಸಾಹಸ ಭೀಮ ವಿಜಯ"** ಎಂಬ ಕೃತಿಯಿಂದ ಆರಿಸಲಾಗಿರುವ **"ಛಲಮನೆ ಮೆಱೆವೆಂ"** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** "ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆಯಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ದುರ್ಯೋಧನನ ಕೋಪ ಹೆಚ್ಚಾಗಲು ಕಾರಣವನ್ನು ನೀಡುವುದಲ್ಲದೆ ತನ್ನ ಸಹೋದರರು ಸತ್ತಿಲ್ಲ ಅವರು ಮತ್ತೆ ಹುಟ್ಟಿಬರುವವರೆಂಬ ನಂಬಿಕೆ ಹೊಂದಿರುವುದು ಹಾಗೂ ಛಲಕ್ಕಾಗಿ ಹೋರಾಡುವ ಆತನ ನಿಲುವು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**45. "ರಘೂದ್ವಹನ ಸೊಲ್ಗೇಳಿ ನಮಿಸಲ್"**

**ಆಯ್ಕೆ :–** ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ **"ಜೈಮಿನಿ ಭಾರತ"** ಮಹಾಕಾವ್ಯದಿಂದ ಆಯ್ದ **"ವೀರಲವ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**46. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"**

**ಆಯ್ಕೆ :–** ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ **"ಜೈಮಿನಿ ಭಾರತ"** ಮಹಾಕಾವ್ಯದಿಂದ ಆಯ್ದ **"ವೀರಲವ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**47. "ಅರಸುಗಳ ವಾಜಿಯಂ ಬಿಡು"**

**ಆಯ್ಕೆ :–** ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ **"ಜೈಮಿನಿ ಭಾರತ"** ಮಹಾಕಾವ್ಯದಿಂದ ಆಯ್ದ **"ವೀರಲವ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**48. "ಜಾನಕಿಯ ಮಗನಿದಕೆ ಬೆದರುವನೆ"**

**ಆಯ್ಕೆ :–** ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ **"ಜೈಮಿನಿ ಭಾರತ"** ಮಹಾಕಾವ್ಯದಿಂದ ಆಯ್ದ **"ವೀರಲವ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ವೀರಲವನು ತನ್ನ ಉತ್ತರೀಯದಿಂದ ರಾಮನ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.

**ಸ್ವಾರಸ್ಯ :–** ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.

**ಕಂಠಪಾಠದ ಪದ್ಯಗಳು (ಕಡ್ಡಾಯವಾಗಿ ಕಂಠಪಾಠ ಮಾಡುವುದು)**

**1. ಸಂಕಲ್ಪಗೀತೆ**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ–ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**2. ಹಕ್ಕಿ ಹಾರುತಿದೆ ನೋಡಿದಿರಾ ?**

ನೀಲಮೇಘಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**3. ಹಲಗಲಿ ಬೇಡರು**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**4. ಕೌರವೇಂದ್ರನ ಕೊಂದೆ ನೀನು**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

**5. ಹಸುರು**

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ !

**6. ವೀರಲವ**

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂತಡೆಯಲೆಂದಿರ್ದ ಲೇಖನವನೋದಿ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು
ಲವನುರಿದೆದ್ದನು॥

**7. ಛಲಮನೆ ಮೆರೆವೆಂ**

ನೆಲಕಿಚೆವೆನೆಂದು ಬಗೆದಿರೆ।
ಚಲಕಿಚೆವೆಂ ಪಾಂಡುಸುತರೊಳೀನೆಲನಿದು ಪಾ॥
ಟ್ಸಿಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವೆನೇ॥

**XI. ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು.**

**1. ಸಂಕಲ್ಪಗೀತೆ**

**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ.**
**ಹೊಸ ಭರವಸೆಗಳ ಕಟ್ಟೋಣ**
**ಮನುಜರ ನಡುವಣ ಅಡ್ಡಗೋಡೆಗಳ**
**ಕೆಡುವುತ ಸೇತುವೆಯಾಗೋಣ**

ಜನರಲ್ಲಿ ಇಂದು ನಾನಾ ಕಾರಣಗಳಿಗಾಗಿ ನಂಬಿಕೆ ವಿಶ್ವಾಸ, ಹೊಂದಿ ಬಾಳುವ ಗುಣ ಮುಂತಾದ ಸುಖಭಾವದ ಆಧಾರ ಸ್ತಂಭಗಳೇ ಬಿದ್ದು ಹೋಗಿವೆ. ಹೀಗಾಗಿ ಚೆನ್ನಾಗಿ ಬದುಕುತ್ತೇವೆ ಎಂಬ ಭರವಸೆಯೇ ಹೊರಟು ಹೋಗುತ್ತಿದೆ. ಆದ್ದರಿಂದ ಮನುಷ್ಯರಲ್ಲಿ ನಂಬಿಕೆ, ವಿಶ್ವಾಸ, ಪ್ರೀತಿ, ಸ್ನೇಹ, ಸಹಕಾರಗಳೆಂಬ ಆಧಾರ ಸ್ತಂಭಗಳನ್ನು ಮತ್ತೆ ಮೇಲೆಬ್ಬಿಸಿ ಅವು ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವ ಹೊಸ ಭರವಸೆಗಳನ್ನು ಕಟ್ಟೋಣ. ಭಾಷೆ, ಜಾತಿ, ಮತ, ಧರ್ಮಗಳಲ್ಲಿನ ಭೇದ–ಭಾವಗಳಿಂದ ಜನರಲ್ಲಿ ಅಸಮಾನತೆ, ಅಪನಂಬಿಕೆ, ಅಸ್ಪೃಶ್ಯತೆ ಮೊದಲಾದ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವನ್ನು ಸಮಾನತೆ ಸ್ನೇಹ, ಪ್ರೀತಿ, ಒಳ್ಳೆಯ ಚಿಂತನೆಗಳ ಮೂಲಕ ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹಬಾಳ್ವೆಗೆ ಸೇತುವೆಯಾಗುವ ಸಂಕಲ್ಪ ತೊಡಬೇಕೆಂದು ಕವಿ ಜೆ.ಎಸ್. ಶಿವರುದ್ರಪ್ಪನವರು ಆಶಿಸುತ್ತಾರೆ. ಸಮಾನತೆಯ ಅಂಶವನ್ನು ಸಾರುತ್ತ ಎಲ್ಲರೂ ಪ್ರೀತಿ ವಿಶ್ವಾಸಗಳಿಂದ ಬದುಕಬೇಕೆಂಬ ಮೌಲ್ಯವನ್ನು ಈ ಪದ್ಯದಲ್ಲಿ ಅಭಿವ್ಯಕ್ತಿಸಲಾಗಿದೆ.

**2. ಹಕ್ಕಿ ಹಾರುತಿದೆ ನೋಡಿದಿರಾ.**

**ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ**
**ಮಂಡಲ ಗಿಂಡಲಗಳ ದಡಮುಕ್ಕಿ**
**ತೇಲಿಸಿ ಮುಳುಗಿಸಿ ಖಂಡ ಖಂಡಗಳ**
**ಸಾರ್ವಭೌಮರ ನೆತ್ತಿಯ ಕುಕ್ಕಿ**
**ಹಕ್ಕಿ ಹಾರುತಿದೆ ನೋಡಿದಿರಾ.**

ದ. ರಾ. ಬೇಂದ್ರೆಯವರುವರು ಈ ಪದ್ಯದಲ್ಲಿ ಕಾಲದ ಸಾರ್ವಭೌಮತ್ವವನ್ನು ವಿವರಿಸಿದ್ದಾರೆ. ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು ಇದೇ ಕಾಲ. ಹಾಗೆಯೇ ಅವುಗಳ ನಡುವೆ ತೆನೆಯಲ್ಲಿನ ಕಾಳುಗಳನ್ನು ಬೇರ್ಪಡಿಸುವಂತೆ ಬೇರೆ–ಬೇರೆ ಮಾಡಿದ್ದು, ಇದೇ ಕಾಲ. ರಾಜ–ಮಹಾರಾಜರ ಸಣ್ಣ–ದೊಡ್ಡ ಕೋಟೆ ಕೊತ್ತಲಗಳನ್ನು ಗಬಕ್ಕನೆ ನಾಶ ಮಾಡಿದ್ದು, ಇದೇ ಕಾಲವೇ. ವಿಶ್ವದ ಎಲ್ಲಾ ಭಾಗಗಳನ್ನು ಒಂದು ಸಲ ವೈಭವದಿಂದ ಮೆರೆಯುವಂತೆ ಮಾಡಿ ಮತ್ತೊಂದು ಸಲ ಮುಳುಗುವಂತೆ ಮಾಡಿದೆ. ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಕಾಲಪಕ್ಷಿ ಮೆಟ್ಟಿ ನಿಂತಿದೆ ಎಂಬ ಮೌಲ್ಯಯುತ ಅಂಶಗಳು ಈ ಪದ್ಯದಲ್ಲಿ ಅಡಕಗೊಂಡಿವೆ.

**3. ಮರಳು ಮಾಧವ ಮಹಿಯ ರಾಜ್ಯದ**

**ಸಿರಿಗೆ ಸೋಲುವನಲ್ಲ ಕೌಂತೇ**
**ಯರು ಸಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ**
**ಹೊರೆದ ದಾತಾರಂಗೆ ಹಗೆವರ**
**ಶಿರವನರಿದೊಪ್ಪಿಸುವೆನೆಂಬೀ**
**ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ.**

ಹೇ ಮರಳು ಮಾಧವ ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ. ಕುಂತಿಯ ಪುತ್ರರು, ದುರ್ಯೋಧನರಿಂದ ನನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸ್ಸಿಲ್ಲ. ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು. ಆದರೆ ಕೌರವೇಂದ್ರನನ್ನು ಕೊಂದೆ ನೀನು ಎಂದು ಹೇಳಿದನು.

ಕರ್ಣನ ಜನ್ಮ ರಹಸ್ಯ ಶ್ರೀ ಕೃಷ್ಣನಿಂದ ಗೊತ್ತಾದ ನಂತರ ವಿಧಿಯಿಲ್ಲದೆ ಕರ್ಣನ ಮನದಾಳದಲ್ಲಿದ್ದ ಮಾತುಗಳು ಹೊರಬಂದು ತನ್ನ ಒಡೆಯ ದುರ್ಯೋಧನನಿಗೆ ಶತ್ರುಗಳ ತಲೆಗಳನ್ನು ಒಪ್ಪಿಸುತ್ತದೆ. ಆದರೆ ನೀನು ನನ್ನ ಮಹದಾಸೆಗೆ ಕಂಟಕವಾದೆ ಎಂಬ ಅಂಶಗಳು ಕರ್ಣನ ಸ್ವಾಮಿನಿಷ್ಠೆಯ ಮೌಲ್ಯಗಳು ಈ ಪದ್ಯದಲ್ಲಿ ಅಡಕಗೊಂಡಿವೆ.

**4. ಛಲಮನೆ ಮೆರೆವೆಂ**

**ನೆಲಕಿಜೆವೆನೆಂದು ಬಗೆದಿರೆ।**
**ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ॥**
**ಟಿಕ್ಸಿಲನೆನಗೆ ದಿನಪಸುತನಂ।**
**ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವಪೆನೇ॥**

ದುರ್ಯೋಧನನು ಭೀಷ್ಮನನ್ನು ಕುರಿತು ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವಿರೇ? ಛಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳು ಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ? ಎಂದು ಆತ್ಮಾಭಿಮಾನದಿಂದ ಹೇಳುತ್ತಾನೆ. ದುರ್ಯೋಧನನ ಸ್ವಾಭಿಮಾನ, ಕರ್ಣನ ಮೇಲೆ ಆತನಿಗಿದ್ದ ಅಪಾರವಾದ ಮಮತೆ ಸ್ನೇಹ ಗುಣಗಳು ಈ ಪದ್ಯದಲ್ಲಿ ಬಹು ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ.

**5. ವೀರಲವ**

**ಊರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ**
**ನೊರ್ವನೇ ವೀರನಾತನ ಯಜ್ಞತುರಗಮಿದು**
**ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ**
**ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ**
**ಸರ್ವಜನ ಮುಂ ಬಂಜೆಯನ್ನ ದಿರ್ದಪುದೆ ತನ**
**ಗುರ್ವ ತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.**

ಭೂಮಂಡಲದಲ್ಲಿ ಕೌಸಲ್ಯೆಯು ಪಡೆದ ಕುಮಾರರು ರಾಮನು ಒಬ್ಬನೇ ವೀರನು, ಅವನ ಯಜ್ಞ ಕುದುರೆಯು ಇದು. ಇದನ್ನು ನಿಭಾಯಿಸಲು ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ ಎಂದು ಇದ್ದ ಬರೆಹವನ್ನು ಓದಿ ಆತನ ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದಿರುವರೇ? ತನಗೆ ಇರುವ ತೋಳಗಳು ಇವು ಏತಕೆ? ಎಂದು ನಿಜ ಪ್ರತಿಜ್ಞೆಯನ್ನು ಕೈಗೊಂಡು ಲವನು ಆಕ್ರೋಶಗೊಂಡನು. ಲವನ ಕ್ಷಾತ್ರಗುಣ, ವೀರತೆ ಪರಾಕ್ರಮ, ಆವೇಶ ಅತ್ಯುತ್ಸಾಹದ ಗುಣಗಳು ಈ ಪದ್ಯದಲ್ಲಿ ಅಡಕಗೊಂಡಿದೆ.

**6. ಹಸುರು**

**ಹಸುರತ್ತಲ್! ಹಸುರಿತ್ತಲ್**
**ಹಸುರೆತ್ತಲ್ ಕಡಲಿನಲಿ**
**ಹಸುರ್ಗಟ್ಟಿತೊ ಕವಿಯಾತ್ಮಂ**
**ಹಸುರ್ ನೆತ್ತರ್ ಒಡಲಿನಲಿ**

ಕವಿ ಕುವೆಂಪು ರವರು ಹೇಳುವಂತೆ ಆ ಕಡೆ ನೋಡಿದರೂ ಹಸಿರು. ಈ ಕಡೆ ನೋಡಿದರೂ ಹಸುರು. ಕವಿಯ ಮನದಲ್ಲಿ ಹಸಿರಿಗೆ ಪ್ರಾಧಾನ್ಯತೆ. ಸದಾ ನೀಲಿಯಾಗಿ ಎಲ್ಲರಿಗೂ ಕಡಲು ಕಾಣಿಸಿದರೆ ಕುವೆಂಪು ರವರಿಗೆ ಅದೇ ನೀಲಿ ಕಡಲು ಹಸುರಿನಂತೆ ಕಾಣುತ್ತದೆ. ಏಕೆಂದರೆ ಕವಿಯ ಆತ್ಮವು ಹಸುರುಗಟ್ಟಿದೆ. ಅವರ ಒಡಲಿನಲಿ ಹರಿಯುವ ನೆತ್ತರು ಕೂಡ ಹಸುರಾಗಿದೆ ಎಂದು ಹೇಳುವಲ್ಲಿ ಕವಿಯು ಹಸುರು ಬಣ್ಣ (ಪ್ರಕೃತಿಗೆ) ನೀಡಿರುವ ಪ್ರಾಮುಖ್ಯತೆಯನ್ನು ಕಾಣಬಹುದಾಗಿದೆ. ಕವಿ ಕುವೆಂಪು ರವರು ಎಲ್ಲೆಲ್ಲೂ ಹಸುರನ್ನು ಕಾಣುವ, ಹಸುರನ್ನು ಆರಾಧಿಸುವ ಹಸುರಿಗೆ ಅವರ ಮನ ಸೋತು ಹೋಗಿರುವ ಮೌಲ್ಯಗಳನ್ನು ಈ ಪದ್ಯದಲ್ಲಿ ಕಾಣಬಹುದು.

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ:**

**1. ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ :** ಸೈನ್ಯದಲ್ಲಿ ವೈದ್ಯನಾಗಿದ್ದ ರಾಹಿಲನು ಯುದ್ಧದಲ್ಲಿ ಗಾಯಗೊಂಡು ಶತ್ರು ಸೈನಿಕರಿಂದ ತಪ್ಪಿಸಿಕೊಂಡು ಮುದುಕಿಯ ಮನೆಗೆ ಬಂದಾಗ ಅವಳ ಸೊಸೆ ಹೆರಿಗೆ ನೋವಿನಿಂದ ಬಳಲುತ್ತಿರುತ್ತಾಳೆ. ವೈದ್ಯನಾಗಿದ್ದ ರಾಹಿಲನು ತನ್ನ ಕಾಲಿನ ನೋವನ್ನೂ ಮರೆತು ಮಗುವನ್ನು ರಕ್ಷಿಸಲು ಸಾಧ್ಯವಾಗದಿದ್ದರೂ ತಾಯಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ. ಹೀಗೆ ರಾಹಿಲನು ಮುದುಕಿಯು ಕುಟುಂಬಕ್ಕೆ ನೆರವಾಗುತ್ತಾನೆ. ಅದೇ ವೇಳೆಯಲ್ಲಿ ಅವನನ್ನು ಹುಡುಕಿಕೊಂಡು ಶತ್ರು ಸೈನಿಕರು ಮುದುಕಿಯ ಮನೆಗೆ ಬರುತ್ತಾರೆ. ಬಾಗಿಲು ತೆಗೆಯಬೇಡಿ ಎಂದು ರಾಹಿಲನು ದಯನೀಯ ನೋಟದಿಂದ ಕೈ ಸನ್ನೆ ಮಾಡಿದಾಗ, ಮುದುಕಿಯು ಆ ನೋಟದಲ್ಲಿ ತನ್ನ ಮಗನನ್ನು ಕಾಣುತ್ತಾಳೆ. ಅವನು ಸಂಕಷ್ಟದಲ್ಲಿ ತನ್ನ ಸೊಸೆಯ ಪ್ರಾಣ ಉಳಿಸಿದ್ದರಿಂದ ಮುದುಕಿಯು ಅವನನ್ನು ಸೊಸೆ ಮಲಗಿದ್ದ ಕೋಣೆಯಲ್ಲಿ ಮಂಚದಡಿಯಲ್ಲಿ ಬಚ್ಚಿಟ್ಟು ಅಲ್ಲಿಗೆ ಬಂದಿದ್ದ ಸೈನಕರಿಗೆ ಈ ಕಡೆ ಯಾರೂ ಬಂದಿಲ್ಲ ಎಂದು ಸುಳ್ಳು ಹೇಳಿ ರಾಹಿಲನನ್ನು ರಕ್ಷಿಸಿದಳು.

**2. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?**

**ಉತ್ತರ:** ಶಬರಿ ಮತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ. ಸಿದ್ಧರಾದ ಮತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, "ರಾಮ ಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ. ನಿನ್ನಿಷ್ಟಾರ್ಥ ನೆರವೇರುತ್ತದೆ ಎಂದಿದ್ದರು. ಅವರ ಮಾತಿನಂತೆ ಮತಂಗಾಶ್ರಮಕ್ಕೆ ರಾಮ ಲಕ್ಷ್ಮಣರು ಬರುತ್ತಾರೆ.ಶಬರಿಯು ಇವರ ದರ್ಶನದಿಂದ ಪುಳುಕಿತಳಾದಳು. ಕಣ್ತುಂಬ ರಾಮನ ದರ್ಶನ ಮಾಡಿ, ಮುಟ್ಟಿ ನಮಸ್ಕರಿಸಿ ಸಂಭ್ರಮಿಸಿದಳು. ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ. ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸಿದಳು, ಧನ್ಯಳಾದೆನೆಂದು ಸಂತಸ ವ್ಯಕ್ತ ಪಡಿಸಿದಳು. ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು. ಈಕೆಗೆ ಆಸೆ ಈಡೇರಿತು ಹಾಗಾಗಿ "ನಂಬಿ ಕೆಟ್ಟವರಿಲ್ಲ" ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

**3. ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**

**ಉತ್ತರ :** ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು. ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು. ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರಿಕೃತವಾಗಿದ್ದ ನ್ಯಾಯಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ರಾಜ್ಯ ಪ್ರವಾಸ ಮಾಡಿ ಅಜಮಾಯಿಸಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಅದ್ಯತೆ ನೀಡಿದರು ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಭಾಷೆ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರಪ್ರಾಸಸ್ತ್ಯ ನೀಡಿದರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

**4. ಕವಿ ಸಿದ್ಧಲಿಂಗಯ್ಯ ಹೇಳಿದ ಮನೆ ಮಂಚಮ್ಮ ಕತೆಯನ್ನು ಬರೆಯಿರಿ.**

**ಉತ್ತರ :** ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯಲ್ಲಿ ಒಂದು ಸಲ ಒಂದು ಗ್ರಾಮದ ಜನರೆಲ್ಲ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈ ಮೇಲೆ ದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ನ ಮಕ್ಕಳಾ" ಎಂದು ಅಬ್ಬರಿಸಿದಾಗ ಕೆಲಸ ನಿಲ್ಲಿಸಿದ ಜನ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು, ಆ ದೇವತೆ ಮತ್ತು ಜನರ ನಡುವೆ ಮಾತುಕತೆ ನಡೆಯುತ್ತದೆ. ಏನು ಮಾಡುತ್ತಿದ್ದೀರಿ ಎಂಬ ದೇವತೆಯ ಪ್ರಶ್ನೆಗೆ ಜನರೆಲ್ಲ ನಿನಗೊಂದು ಗುಡಿ ಕಟ್ಟುತ್ತಿದ್ದೀವಿ ಎಂದು ಉತ್ತರಿಸುತ್ತಾರೆ. ಆಗ ದೇವತೆಯು ನನಗೆ ನೀವು ಮನೆ ಕಟ್ಟುತ್ತಿರುವಿರಾದರೆ ನನ್ನ ಮಕ್ಕಳಾದ ನಿಮಗೆಲ್ಲ ಮನೆ ಇದೆಯೊ? ಎಂದು ಪ್ರಶ್ನೆಸುತ್ತಾಳೆ. ಆ ಜನರಲ್ಲಿ ಒಬ್ಬ ನನಗಿಲ್ಲ ಎಂದು ಉತ್ತರಿಸಿದಾಗ ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎಂದು ಆದೇಶಿಸಿದ ಮಂಚಮ್ಮ ಮನೆ ಮಂಚಮ್ಮ ಳಾಗುತ್ತಾಳೆ. ಹೀಗೆ ಚಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆ ಮಂಚಮ್ಮ ಇಂದಿಗೂ ಪೂಜಿತಳಾಗುತ್ತಿದ್ದಾಳೆ.

**5. ಶಾನುಭೋಗರನ್ನು ರಕ್ಷಿಸಿದು ಖಿರ್ದಿ ಪುಸ್ತಕವೇ ? ಹುಲಿಯ ಧರ್ಮವೇ ? ಸಮರ್ಥನೆಯೊಂದಿಗೆ ವಿವರಿಸಿ.**

**ಉತ್ತರ :** ಹುಲಿಗಳು ಹಿಂದಿನಿಂದ ಮೇಲೆ ಬೀಳುವುದಿಲ್ಲವೆಂದು ಅರಿತಿದ್ದ ಶಾನಭೋಗರು ಉಪಾಯವಾಗಿ ಹುಲಿಗೆ ಬೆನ್ನು ತಿರುಗಿಸಿ ನಡೆದು ನಡೆದು ದಣಿದರು. ಆ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ನೆನಪಾಗಿದ್ದು ಅವರ ಬಳಿಯಿದ್ದ ಖಿರ್ದಿ ಪುಸ್ತಕ. ಅದು ಸದ್ಯಕ್ಕೆ ಅವರ ಬಳಿಯಿದ್ದ ಬ್ರಹ್ಮಾಸ್ತ್ರ. ಆದ್ದರಿಂದ ಹುಲಿಯ ಮುಖಕ್ಕೆ ಬಡಿದಾಗ ಏನಾಯಿತೆಂದು ಅರಿಯಲು ಅರೆ ನಿಮಿಷ ಹಿಡಿಯಿತು. ಅದನ್ನೆ ಉಪಯೋಗಿಸಿಕೊಂಡು ಓಡಿದ ಅವರು ಕಲ್ಲು ಎಡವಿ ಬಿದ್ದು ಮೂರ್ಛೆ ಹೋದಾಗ ಅಷ್ಟರಲ್ಲಿ ಅಲ್ಲಿಗೆ ಬರುತಿದ್ದ ರೈತರ ಶಬ್ದ ಕೇಳಿ ಹುಲಿ ಪಲಾಯನ ಮಾಡಿತು. ಅವರಿಗೆ ಆ ಅರೆ ನಿಮಿಷದ ಅವಕಾಶವನ್ನು ಒದಗಿಸಿ ಕೊಟ್ಟು ಪ್ರಾಣವನ್ನು ಕಾಡಿದ ಖಿರ್ದಿ ಪುಸ್ತಕದ ಮೇಲೆ ಅವರಿಗೆ ಕೃತಜ್ಞತಾ ಭಾವವಿದೆ. ಖಿರ್ದಿ ಪುಸ್ತಕವೇ ತಮ್ಮ ಜೀವ ಉಳಿಸಿತು ಎಂಬುದು ಅವರ ನಂಬಿಕೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದಿದ್ದು ಖಿರ್ದಿ ಪುಸ್ತಕದಿಂದಲ್ಲ. ಹುಲಿಯ ಧರ್ಮ ಶ್ರದ್ಧೆಯಿಂದ. ಏಕೆಂದರೆ ಭರತ ಖಂಡದ ಹುಲಿಗಳು ಹಿಂದಿನಿಂದ ದಾಳಿ ಮಾಡಿ ಕೊಲ್ಲದಿರುವ ಧರ್ಮ ಶ್ರದ್ಧೆಯ ಗುಣ. ಮನಸ್ಸು ಮಾಡಿದ್ದರೆ ಹುಲಿ ಯಾವಾಗಲೋ ಶಾನುಭೋಗರನ್ನು ಕೊಲ್ಲಬಹುದಿತ್ತು. ಆದರೆ ಹುಲಿಯ ಶ್ರದ್ಧೆಯೇ ಶಾನುಭೋಗರು ಹುಲಿಯಿಂದ ಪಾರಾಗಲು ಕಾರಣವಾಯಿತು ಎಂದು ಹೇಳಬಹುದು.

**6. ದುಷ್ಟ ಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾದ ಬಗೆಯನ್ನು ತಿಳಿಸಿ.**

**ಉತ್ತರ :** ದುಷ್ಟ ಬುದ್ಧಿಯು ಧರ್ಮಬುದ್ಧಿಯೊಡನೆ ಸೇರಿ ವ್ಯಾಪಾರ ಮಾಡಿ, ಲಾಭಗಳಿಸಿದ್ದ ಹೊನ್ನನ್ನು ತಾನೇ ದೋಚಿ, ಕಳ್ಳತನವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿ, ಇದಕ್ಕೆ ವಟವೃಕ್ಷವೇ ಸಾಕ್ಷಿ ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ. ಇದರಿಂದ ಧರ್ಮಬುದ್ಧಿ ಮತ್ತು ಧರ್ಮಾಧಿಕಾರಿಗಳಿಗೆ ಆಶ್ಚರ್ಯವಾಗುತ್ತದೆ. ದುಷ್ಟ ಬುದ್ಧಿಯು ತಂದೆಯ ಬುದ್ಧಿ ಮಾತನ್ನು ಆಲಿಸದೇ, ಮರದಿಂದ ಸಾಕ್ಷಿ ಹೇಳಿಸಲು ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ, ಅವನಿಂದ ಧರ್ಮಬುದ್ಧಿಯೇ ಚಿನ್ನ ಕದ್ದನೆಂದು ಸುಳ್ಳು ಹೇಳಿಸುತ್ತಾನೆ. ಧರ್ಮಬುದ್ಧಿಯು ದೈವಭಕ್ತನಾಗಿದ್ದು ಸತ್ಯ ಹೊರಬರುತ್ತದೆ ಎಂದು ನಂಬಿದ್ದನು. ಅವನ ನಂಬಿಕೆಯು ಸುಳ್ಳಾದಾಗ ಮರದ ಬಳಿ ಪರೀಕ್ಷಿಸಿ ಪೊಟರೆಯೊಳಗೆ ಮನುಷ್ಯ ಸಂಚಾರವಾಗಿರುವುದನ್ನು ಕಂಡುಕೊಳ್ಳುತ್ತಾನೆ. ಧರ್ಮಾಧಿಕಾರಿಗಳಿಗೆ ತಾನು ವ್ಯಾಪಾರಿಯು ಮನೋಭಾವದಂತೆ ಸುಳ್ಳು ಹೇಳಿದ್ದಾಗಿ ಚಿನ್ನವನ್ನು ತಾನೇ ತೆಗೆದುಕೊಂಡಿದ್ದಾಗಿ ತಿಳಿಸಿ. ಈಗ ಆ ಚಿನ್ನಕ್ಕೆ ಹಾವು ಸುತ್ತಿಕೊಂಡಿದೆ ಎಂದು ಹೇಳಿ, ಚಿನ್ನವನ್ನು ತೆಗೆಯಲು ಮರದ ಪೊಟರೆಗೆ ಹುಲ್ಲು ಕಡ್ಡಿಯಿಟ್ಟು ಬೆಂಕಿ ಇಡುತ್ತಾನೆ. ಪೊಟರೆಗೆ ಹೊಗೆ ತುಂಬಿ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಉಸಿರು ಕಟ್ಟಿ ಕೂಗಾಡುತ್ತ ಪೊಟರೆಯಿಂದ ಉರುಳಿ ಪ್ರಾಣ ಬಿಡುತ್ತಾನೆ. ದುಷ್ಟಬುದ್ಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ. ಹೀಗೆ ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾಯಿತು.

**7. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

**ಉತ್ತರ :** ನಾವು ಜೀವನದಲ್ಲಿ ಪ್ರೀತಿಯ ದ್ವೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಕೈಗೊಳ್ಳುವುದರಿಂದ ನದೀ ಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಂಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ನಾವು ಸಮಾನತೆ ಮನೋಭವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಬಹುದು. ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

**8. ಹಕ್ಕಿಯನ್ನು ಕಾಲ ಗತಿಗೆ ಹೋಲಿಸುತ್ತಾ ಕವಿ ದ.ರಾ. ಬೇಂದ್ರೆ ಹೇಳಿರುವ ಮಾತುಗಳಾವುವು ?**

**ಉತ್ತರ :** ದ.ರಾ.ಬೇಂದ್ರೆಯವರು "ಹಕ್ಕಿ ಹಾರುತಿದೆ ನೋಡಿದಿರಾ" ಕವನದಲ್ಲಿ ಚಲನ ಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ. ವಿಶ್ವ ವ್ಯಾಪಿ ಕಾಲವು ಕೇವಲ ಗತಿ ಶೀಲವಲ್ಲ, ಪ್ರಗತಿ ಶೀಲ ಕೇವಲ ಕಣ್ಣು ಮಿಟುಕಿಸುವ ಸಮಯದಲ್ಲಿ ಈ ಕಾಲ ಪಕ್ಷಿ ಸದೂರ ಗಮಿಸಬಲ್ಲದು, ಭೂತಕಾಲ, ವರ್ತಮಾನಕಾಲ, ಭವಿಷ್ಯತ್ಕಾಲಗಳು ಕಾಲಪಕ್ಷಿಯ ಚಲನೆಯ ಅಂಶಗಳು. ಎಲ್ಲ ಜನಾಂಗಗಳನ್ನು ಈ ಕಾಲಪಕ್ಷಿ ಹೊತ್ತು ಮುನ್ನಡೆದಿದೆ. ಆಕಾಶ ಅನಂತವಾದದ್ದು ಹಾಗೆಯೇ ಕಾಲ ಪಕ್ಷಿಯು ಅನಂತವಾದದ್ದು. ಕಾಲ ಪಕ್ಷಿಯು ಚಿಕ್ಕೆಗಳ ಮಾಲೆಯನ್ನು ಅಂದರೆ ಆಕಾಶಗಂಗಯೇ ಮೊದಲಾದ ವಿಶ್ವಗಳನ್ನು ಸೆಕ್ಕಿಸಕೊಂಡಿದೆ. ಸೂರ್ಯಚಂದ್ರರು ಕಾಲಪಕ್ಷಿಯ ಕಣ್ಣುಗಳು. ಸಣ್ಣ ಪುಟ್ಟರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸುವ ಕಾಲ ಪಕ್ಷಿಯು ಅವುಗಳನ್ನು ನಾಶಮಾಡುವ ಕಾರ್ಯವನ್ನು ಮಾಡುವುದು. ಕಾಲ ಪಕ್ಷಿಯ ಮುಂದೆ ಯಾವ ಸಾರ್ವಭೌಮರ ಆಟವೂ ನಡೆಯಲಾರದು. ಎಲ್ಲರೂ ಕಾಲಪಕ್ಷಿಗೆ ತಲೆಬಾಗಲೇಬೇಕು. ಕಾಲಪಕ್ಷಿಯು ಹೊಸ ಯುಗಕ್ಕೊಮ್ಮೆ ಅದರ ಹಣೆಬರಹವನ್ನು ಬರೆಯುವ ಮತ್ತು ಹಳೆ ಯುಗದ ಹಣೆಬರಹ ಹೊರೆಸುವ ಕಾರ್ಯವನ್ನು ಮಾಡುವುದು. ಯುಗ ಯುಗಗಳನ್ನು ಮನ್ವಂತರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದೆ. ಹೊಸ ಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿ ಎಂದು ಬೇಂದ್ರೆಯವರು ಕಾಲಪಕ್ಷಿಯನ್ನು ವರ್ಣಿಸಿದ್ದಾರೆ.

**9. ಹಲಗಲಿ ದಂಗೆಗೆ ಕಾರಣವೇನು ? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು ?**

**ಉತ್ತರ :** 1857 ರ ಸಿಪಾಯಿ ದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಅದರ ಪ್ರಕಾರ ಭಾರತೀಯರು ಬ್ರೀಟಿಷರ ಅನುಮತಿಯಿಲ್ಲದೆ ಆಯುಧಗಳನ್ನು ಹೊಂದುವ ಹಾಗಿರಲಿಲ್ಲ ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು. ಹಲಗಲಿ ಬೇಡರಿಗೆ ಆಯುಧಗಳೇ ಜೀವವಾಗಿತ್ತು. ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆಯೆದ್ದರು. ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ಮನವೊಲಿಸಲು ಬಂದ ಹೆಬಲಕ್ ಎಂಬ ಅಧಿಕಾರಿಯನ್ನು ಕೊಂದರು. ಕೋಪಗೊಂಡ ಕಂಪನಿಯ ಸರಕಾರ ಬೇಡರನ್ನು ಕಂಡಕಂಡಲ್ಲಿ ಸಾಯಿಸಿತು. ಬೇಡರ ಮುಖಂಡರನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆಗೆಯ್ಯಲಾಯಿತು. ಹಲಗಲಿ ಊರನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಹೇಗೆ ಹಲಗಲಿ ದಂಗೆಯನ್ನು ಸರಕಾರ ನಿಯಂತ್ರಿಸಿತು.

**10. ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳೇನು ?**

**ಉತ್ತರ :** ಕರ್ಣ ನಿಮಗೂ ಯಾದವರು ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ, ನಿನ್ನಾಣೆ, ನೀನು ನಿಜವಾಗಿ ಈ ಭೂಮಿಯ ಒಡೆಯ ಆದರೆ ನಿನಗೆ ಆ ಕುರಿತು ತಿಳಿದಿಲ್ಲ" ಎಂದು ಕೃಷ್ಣ ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು. ಬಳಿಕ ಧರ್ಮರಾಯ, ಭೀಮಾರ್ಜುನರು ಜನಿಸಿದರು. ಹಾಗೆ ಮಾದ್ರಿಯಲ್ಲಿ ಐದನೇ ಮಂತ್ರದಲ್ಲಿ ನಕುಲ, ಸಹದೇವ ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುವೆ. ಕೌರವರ, ಪಾಂಡವರ ಸೈನ್ಯ ನಿನ್ನ ಸೇವೆ ಮಾಡುವರು. ನೀನು ದುರ್ಯೋಧನನ ಬಾಯಂಜಲಿಗೆ ಕೈಯೊಡ್ಡುವುದೇಕೆ? ಎಡ ಭಾಗದಲ್ಲಿ ಕೌರವರ ಸಮೂಹ, ಬಲಭಾಗದಲ್ಲಿ ಪಾಂಡವರ ಸಮೂಹ, ಮುಂದುಗಡೆ ಮಾದ್ರ, ಮಾಗದ, ಯಾದವಾದಿಗಳು. ಮಧ್ಯದಲ್ಲಿ ನೀನು ರಾಜ ಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆಯುವುದು ಸರಿಯೇ ? ದುರ್ಯೋಧನನು ನುಡಿಸಲು' ಒಡೆಯನಿಗೆ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ ? ಎಂದು ಆಮಿಷ ಒಡ್ಡಿದನು.

**11. "ಹಸುರು" ಕವನದ ರೀತ್ಯ ಎಲ್ಲಿಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.**

**ಉತ್ತರ :** ಹಸುರು ಕವನವು ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ ಸಮೀಪ ಸಂಬಂದವನ್ನು ತೋರಿಸುತ್ತದೆ. ಕವಿಯಾತ್ಮವು ಹಸುರುಗಟ್ಟಲು ಅಶ್ವಯುಜಮಾಸದ ನವರಾತ್ರಿಯ ದಿನದಲ್ಲಿ ಹೊಸ ಚಿಗುರಿನಿಂದ ಕೂಡಿದ ಭೂಮಿಯಲ್ಲಿ ವಿಶಾಲವಾದ ಶ್ಯಾಮಲ, ಕಡಲು ಹಸುರಾಗಿರುದನ್ನು ನೋಡಿ ಕವಿಯ ಆತ್ಮವು ರಸ ಪಾನದಲ್ಲಿ ಮಿಂದಿತು. ಆಗಸದಲ್ಲಿ, ಮುಗಿಲಿನಲ್ಲಿ, ಗದ್ದೆಯ ಬಯಲಿನಲ್ಲಿ, ಬೆಟ್ಟ ಗುಡ್ಡಗಳಲ್ಲಿ, ಕಣಿವೆಯಲ್ಲಿ, ಸಂಜೆಯ ಬಿಸಿಲಿನಲ್ಲಿ ಹಸುರು ಹರಡಿತು. ಹಾಗೇಯೆ ಅಶ್ವಯುಜ ಮಾಸದಲ್ಲಿ ಭತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯ ಹಸುರಿನಿಂದ ಮೈ ಮುಚ್ಚಿರಲು ಕವಿಗೆ ಬೇರೆ ಬಣ್ಣಗಳೇ ಕಾಣದಾದವು. ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದಗಾನ; ಅತ್ತ–ಇತ್ತ–ಎತ್ತ ನೋಡಿದರೂ ಹಸುರು; ಹಸುರು; ಹಸುರು; ಇದನ್ನು ನೋಡಿದ ಕವಿಯಾತ್ಮವು ಹಸುರುಗಟ್ಟಿತು. ಕವಿಯ ದೇಹದಲ್ಲೂ ಹಸುರು ರಕ್ತವೇ ಹರಿದಾಡಿತು. ಎಂದು ಹಸುರು ವ್ಯಾಪಿಸಿದ ಬಗೆಯನ್ನು ಕವಿ ವರ್ಣಿಸಿದ್ದಾರೆ.

**12. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.**

**ಉತ್ತರ :** ದುರ್ಯೋಧನನು ಭೀಷ್ಮನಿಗೆ ಹೀಗೆ ಹೇಳುವನು. ನಾನು ನೆಲಕ್ಕಾಗಿ ಯುದ್ಧ ಮಾಡುವವನು. ಈ ಭೂಮಿ ನನಗೆ ಪಾಳು ಭೂಮಿಯಿದ್ದಂತೆ. ನನ್ನ ತಮ್ಮ ದುಶ್ಯಾಸನ ಹಾಗೂ ಮಿತ್ರ ಕರ್ಣನನ್ನು ಕೊಂದ ಭೀಮಾರ್ಜುನರನ್ನು ಸಾಯಿಸುವವರೆಗೆ ನನಗೆ ನೆಮ್ಮದಿಯಿಲ್ಲ. ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ಪಾಂಡವರೊಡನೆ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ. ನನ್ನ ಮನದ ದುಃಖ ತೀರಿದ ಬಳಿಕ ಸಂಧಿ ಮಾತು ಎಂದನು. ನನ್ನ ನೂರು ಜನ ತಮ್ಮಂದಿರು ಯುದ್ಧದಲ್ಲಿ ಸತ್ತರು. ಅವರು ಪುನಃ ಬರುವುದಿಲ್ಲ ಆದ್ದರಿಂದ ಪಾಂಡವರೊಡನೆ ಯುದ್ಧ ಮಾಡುವೆನು. ಛಲವನ್ನು ಮೆರೆಯುವೆನು. ಇಂದಿನ ಯುದ್ಧದಲ್ಲಿ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭೂಮಿಗೆ ಒಡೆಯನಾಗುವೆನು. ಆದ್ದರಿಂದ ನಾನು ಯುದ್ಧವನ್ನು ಮಾಡುವೆನು ಎಂದು ಹೇಳಿದನು.

**13. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?**

**ಉತ್ತರ :** ರಾವಣನ ವಧೆಯಿಂದ ಬ್ರಹ್ಮ ಹತ್ಯಾ ದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲು ಶ್ರೀರಾಮನು ಮಹರ್ಷಿಗಳ ಸಲಹೆಯಂತೆ ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವದ ಕುದುರೆಯ ಕಾವಲಿಗೆ ಶತ್ರುಘ್ನನನ್ನು ಕಳುಹಿಸಿದನು. ದೇಶ ದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆಯು ಒಂದು ದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಬರುತ್ತದೆ. ಅಲ್ಲಿ ಮಹರ್ಷಿಗಳ ಆಶ್ರಮದ ಉಪವನದ ಕಾವಲಿಗೆ ನಿಯೋಜಿತನಾಗಿದ್ದ ಲವನು ತನ್ನ ಜೊತೆಯವರ ಕೂಡಿ ಧನುರ್ಧಾರಿಯಾಗಿ ಬರುತ್ತಿದ್ದಾಗ ಅಲ್ಲಿದ್ದ ಕುದುರೆಯನ್ನು ನೋಡಿ ಎಲ್ಲಿಯ ತುರುಗವಿದು ? ಹೀಗೆ ಹೂದೋಟವನ್ನು ಹಾಳುಮಾಡುತ್ತಿದೆಯಲ್ಲ. ವರುಣನಿರುವಲ್ಲಿಗೆ ಹೋಗುವಾಗ ವಾಲ್ಮೀಕಿ ಮಹರ್ಷಿಗಳು ಈ ವನವನ್ನು ನೀಡಿಕೊಳ್ಳಲು ಹೇಳಿ ಹೋಗಿದ್ದಾರೆ. ಅವರು ಮರಳಿ ಬಂದು ಇದನ್ನು ನೋಡಿದರೆ ನನ್ನ ಮೇಲೆ ಮುನಿಸಿಕೊಳ್ಳುವರು ಎಂದು ಯೋಚಿಸಿ ಕುದುರೆಯ ಬಳಿ ಬರಲು ಅದರ ಮೆಲಿದ್ದ ಹಣೆಪಟ್ಟಿಯನ್ನು ನೋಡಿದನು. ಅದರಲ್ಲಿ ಈ ಭೂಮಿಯಲ್ಲಿ ಕೌಸಲ್ಯ ಪಡೆದ ಅವಳ ಮಗ ಶ್ರೀರಾಮನೊಬ್ಬನೇ ವೀರನು. ಆತನ ಯಜ್ಞ ತುರಗವಿದು. ಅದನ್ನು ಕಟ್ಟುವ ವೀರರು ಯಾರಾದರೂ ಇದ್ದರೆ ಕಟ್ಟಬಹುದು ಎಂದಿದ್ದ ಲೇಖನವನ್ನೋದಿದ ವೀರ ಲವನು ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ನನ್ನ ತಾಯಿಯನ್ನು ಜನರು ಬಂಜೆ ಎಂದು ಕರೆಯದಿರುವರೇ! ತನ್ನಲ್ಲಿ ತೋಳ್ಬಲವಿದ್ದು ಏನು ಪ್ರಯೋಜನ? ಎಂದು ಆಲೋಚಿಸಿ ಶ್ರೀರಾಮನ ಯಜ್ಞದ ಕುದುರೆಯನ್ನು ಕಟ್ಟಿಹಾಕಿದನು.

**XIII. 1. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಪವಾಡ, ಮೂಡನಂಭಿಕೆ, ಮಾಟಮಂತ್ರ ಮುಂತಾದವುಗಳ ಬಗ್ಗೆ ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಚರ್ಚಿಸಬೇಕು. ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಮಸ್ಯೆಗಳಿಂದ ವಿಜ್ಞಾನಿಗಳು ವಿಮುಖರಾಗಿರುವುದು ಸಾಧ್ಯವಿಲ್ಲ. ವಿಜ್ಞಾನಿ ತನ್ನ ಶೋಧನೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು. ಸಂಶೋಧನ ಕ್ಷೇತ್ರವಾಗಬೇಕು ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿರದೆ, ಜನರ ನಿತ್ಯ ಜೀವನದ ಸಮಸ್ಯೆಗಳೂ ಆತನ ಸಂಶೋಧನಾ ಕ್ಷೇತ್ರವಾಗಬೇಕು. ಹಲವಾರು ಅತಾರ್ಕಿಕವಾದ ನಡಾವಳಿಗಳಿಂದ ಸಮಾಜವು ಅನ್ಯಾಯಕ್ಕೆ ಒಳಪಟ್ಟಿದ್ದು ಉಸಿರುಕಟ್ಟುವ ವಾತಾವರಣವಿದೆ. ಅದನ್ನು ಶುದ್ಧಗೊಳಿಸುವಲ್ಲಿ ವಿಜ್ಞಾನಿಗಳು ಇನ್ನೂ ಪ್ರಯತ್ನಿಸದೇ ಇರುವುದು ಸರಿಯಲ್ಲ.

**ಪ್ರಶ್ನೆಗಳು :**

**ಅ) ವಿಜ್ಞಾನಿಗಳು ವಿಮುಖರಾಗದೆ ಕೈಗೊಳ್ಳಬೇಕಾದ ಕಾರ್ಯಗಳು ಯಾವುವು ?**

**ಉತ್ತರ :** ವಿಜ್ಞಾನಿಗಳು ವಿಮುಖರಾಗದೆ ಕೈಗೊಳ್ಳಬೇಕಾದ ಕಾರ್ಯಗಳು ಪವಾಡ, ಮೂಡನಂಭಿಕೆ, ಮಾಟಮಂತ್ರ ಮುಂತಾದವುಗಳ ಬಗ್ಗೆ ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಚರ್ಚಿಸಿಬೇಕು. ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಮಸ್ಯೆಗಳಿಂದ ವಿಜ್ಞಾನಿಗಳು ವಿಮುಖರಾಗಿರುವುದು

**ಆ) ಸಂಶೋಧನೆಯ ಬಗ್ಗೆ ಲೇಖಕರ ವಿಚಾರವೇನು ?**

**ಉತ್ತರ:** ವಿಜ್ಞಾನಿ ತನ್ನ ಶೋಧನೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು. ವಿಜ್ಞಾನ ಸಂಶೋಧನ ಕ್ಷೇತ್ರವಾಗಬೇಕು. ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿರದೆ, ಜನರ ನಿತ್ಯ ಜೀವನದ ಸಮಸ್ಯೆಗಳೂ ಆತನ ಸಂಶೋಧನಾ ಕ್ಷೇತ್ರವಾಗಬೇಕು.

**2. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ. ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪು ಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಗೀಜುಗವು ಕುಲಾವಿಯಾಕಾರದ ಆಕರ್ಷಕವಾದ ಗೂಡುಗಳನ್ನು ನೇಯುತ್ತದೆ. ಗೂಡುಕಟ್ಟುವಾಗ, ಸ್ಥಳ ಆಯ್ಕೆ ಮಾಡುವಾಗ ಗೀಜುಗ ಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡುಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಗದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು ಕಟ್ಟುತ್ತವೆ. ಆದರೆ ನೆಲ ಮಟ್ಟದಲ್ಲಿ ಹಾಗೆ ಗೂಡು ಕಟ್ಟುವಾಗಲೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯ, ನದಿ ಕೆರೆಗಳ ಕಮರಿಯೋ ಇರುವೆಡೆ ಬಾಗಿರುವ ಕೊಂಬೆಯ ತುದಿಗೆ ಗೂಡು ಕಟ್ಟುತ್ತದೆ. ಕೆಳಗಡೆ ಆಳವಾದ ಪ್ರಪಾತ ಇರುವುದರಿಂದ ಸ್ವಲ್ಪ ಆಯ ತಪ್ಪಿದರು ಕೊಂಬೆ ಸಮೇತ ಪಾತಾಳಕ್ಕೆ ಬೀಳುವ ಭಯದಲ್ಲಿ ಅದು ಗೂಡು ಕಟ್ಟಿರುವ ಬಳುಕುವ ಕೊಂಬೆಯ ಮೇಲೆ ಹೋಗಿ ಮೊಟ್ಟೆಗಳನ್ನಾಗಲ್ಲೀ ಮರಿಗಳನ್ನಾಗಲೀ ಕದಿಯಲು ಬೆಕ್ಕು ಹಾವು ಮೊದಲಾದ ಯಾವ ಪ್ರಾಣಿಯೂ ಧೈರ್ಯ ಮಾಡುವುದಿಲ್ಲ.

**ಪ್ರಶ್ನೆಗಳು :**

**ಅ) ಗೀಜಗಗಳು ಗೂಡು ಕಟ್ಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳೇನು ?**

**ಉತ್ತರ :** ಗೂಡುಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಗದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು ಕಟ್ಟುತ್ತವೆ. ಆದರೆ ನೆಲ ಮಟ್ಟದಲ್ಲಿ ಹಾಗೆ ಗೂಡುಕಟ್ಟುವಾಗಲೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯ, ನದಿ ಕೆರೆಗಳ ಕಮರಿಯೋ ಇರುವೆಡೆ ಬಾಗಿರುವ ಕೊಂಬೆಯ ತುದಿಗೆ ಗೂಡು ಕಟ್ಟುತ್ತದೆ.

**ಆ) ಗುಬ್ಬಚ್ಚಿಗೂ ಗೀಜುಗನಿಗೂ ಇರುವ ವ್ಯತ್ಯಾಸಗಳೇನು ?**

**ಉತ್ತರ :** ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ. ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪು ಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಗೀಜುಗವು ಕುಲಾವಿಯಾಕಾರದ ಆಕರ್ಷಕವಾದ ಗೂಡುಗಳನ್ನು ನೇಯುತ್ತದೆ.

3. **ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯವಹಾರಿಕ ಎಂದರೆ ಜೀವದ ಭಾಷೆ. ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆಗೆ ಕನ್ನಡ, ತುಳು, ಕೊಂಕಣಿ, ತೆಲುಗು, ತಮಿಳು, ಉರ್ದು ಇತ್ಯಾದಿ, ಎಲ್ಲಾ ಗ್ರಾಂಥಿಕ ಭಾಷೆಗಳೂ ವ್ಯವಹಾರಿಕ ಭಾಷೆಯಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ಗ್ರೀಕ್ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲಿಯೂ ವ್ಯವಹಾರಿಕವಾಗಿಲ್ಲ. ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಾಗಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು, ಓದು ಬರಹ ಬಾರದೆ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಲೆಕ್ಕ ಹಾಕಿ ಸಂಬಳ ಪಡೆಯುತ್ತಾನೆ. ಇದನ್ನು ಲಿಪಿಯ ಉಗಮದ ಕಾಲ ಎನ್ನುವರು.

**ಪ್ರಶ್ನೆಗಳು :**

**ಅ) ವ್ಯವಹಾರಿಕ ಮತ್ತು ಗ್ರಾಂಥಿಕಭಾಷೆಗಳಿಗಿರುವ ವ್ಯತ್ಯಾಸವೇನು ?**

**ಉತ್ತರ :** ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯವಹಾರಿಕ ಎಂದರೆ ಜೀವದ ಭಾಷೆ ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹಾರಿಸುತ್ತಾರೆ. ಉದಾಹರಣೆಗೆ ಕನ್ನಡ, ತುಳು, ಕೊಂಕಣಿ, ತೆಲುಗು, ತಮಿಳು, ಉರ್ದು ಇತ್ಯಾದಿ, ಎಲ್ಲಾ ಗ್ರಾಂಥಿಕ ಭಾಷೆಗಳೂ ವ್ಯವಹಾರಿಕ ಭಾಷೆಯಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ.

**ಆ) ಲಿಪಿಯ ಉಗಮ ಹೇಗಾಯಿತು ?**

**ಉತ್ತರ:** ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಾಗಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು, ಓದು ಬರಹ ಬಾರದೆ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಲೆಕ್ಕ ಹಾಕಿ ಸಂಬಳ ಪಡೆಯುತ್ತಾನೆ. ಇದನ್ನು ಲಿಪಿಯ ಉಗಮದ ಕಾಲ ಎನ್ನುವರು.

4. **ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ, ಕರ್ನಾಟಕ ಬಿಟ್ಟು ಭಾರತವಿಲ್ಲ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಹುರಿದುಂಬಿಸಿದರಲ್ಲದೆ, ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನು ಮರೆಸುತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳುವಳಿ' ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳುವಳಿಯಲ್ಲಿಯೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

**ಪ್ರಶ್ನೆಗಳು :**

**ಅ) ಆಲೂರು ವೆಂಕಟರಾಯರು ಸ್ವದೇಶೀ ಚಳುವಳಿ ಮೂಲಕ ಹೇಗೆ ಮಾದರಿ ಎನಿಸಿದರು ?**

**ಉತ್ತರ :** ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ, ಕರ್ನಾಟಕ ಬಿಟ್ಟು ಭಾರತವಿಲ್ಲ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿವಸ್ತುಗಳ ಬಹಿಷ್ಕಾರ ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು.

**ಆ) ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು ?**

**ಉತ್ತರ :** ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನು ಮರೆಸುತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳುವಳಿ' ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದತು. ವೆಂಕಟರಾಯರು ಈ ಚಳುವಳಿಯಲ್ಲಿಯೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**

## ವೈಯಕ್ತಿಕ ಪತ್ರ ಬರವಣಿಗೆ

**ನಿಮ್ಮನ್ನು ನಿತಿನ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಶಾಲಾ ವಾರ್ಷಿಕೋತ್ಸವ' ವನ್ನು ಕುರಿತು ನಿಮ್ಮ ತಂದೆ/ತಾಯಿ/ಸಹೋದರ/ಸಹೋದರಿ/ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.**

ಕ್ಷೇಮ　　　　　　　　　　ಶ್ರೀ　　　　　　　　　　10 ನೇ ಜನವರಿ 2022

ತೀರ್ಥರೂಪ ತಂದೆಯವರಿಗೆ ನಿಮ್ಮ ಮಗನಾದ ನಿತಿನ್ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಮನೆಯಲ್ಲಿ ಎಲ್ಲರೂ ಆರೋಗ್ಯ ಎಂದು ಭಾವಿಸಿರುತ್ತೇನೆ. ನಮ್ಮ ಶಾಲೆಯಲ್ಲಿ ದಿನಾಂಕ 05ನೇ ಜನವರಿ 2022 ರಂದು 'ಶಾಲಾ ವಾರ್ಷಿಕೋತ್ಸವ'ವನ್ನು ಹಮ್ಮಿಕೊಂಡಿದ್ದೆವು. ನಮ್ಮ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು 'ಶಾಲಾ ವಾರ್ಷಿಕೋತ್ಸವ' ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ವಾರ್ಷಿಕೋತ್ಸವದ ಅಂಗವಾಗಿ ವಾರ್ಷಿಕ ಕ್ರೀಡಾಕೂಟ, ರಸಪ್ರಶ್ನೆ, ಪ್ರಬಂಧ, ಭಾಷಣ, ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಕೆಲವು ಸ್ಪರ್ಧೆಗಳಲ್ಲಿ ನಾನು ಸಹ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೇನೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಹಾಗೆಯೇ ನನ್ನ ವಿದ್ಯಾಭ್ಯಾಸದ ಕಡೆಗೂ ಗಮನ ನೀಡುತ್ತಿದ್ದೇನೆ.

ಈ ಎಲ್ಲ ವಿಷಯವನ್ನು ಮಾತೃಶ್ರೀಯವರಿಗೂ ಹೇಳಿ, ನನ್ನ ನಮಸ್ಕಾರಗಳನ್ನು ತಿಳಿಸಿ.

ನಮಸ್ಕಾರಗಳೊಂದಿಗೆ,
ಇತಿ ತಮ್ಮ ಪ್ರೀತಿಯ ಮಗ

ಹೊರ ವಿಳಾಸ :

ರವರಿಗೆ,
ರಾಮಣ್ಣ ನಾಯಕ
ಮನೆ ನಂ : 3530, ಅಕ್ಷರ ನಿಲಯ
ಕುವೆಂಪು ಓಣಿ, ಒಂಟಿಕೊಪ್ಪಲ್
ಮೈಸೂರು

ನಿಮ್ಮ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬೇರೆ ಊರಿನಲ್ಲಿರುವ ನಿಮ್ಮ ತಂದೆ/ತಾಯಿ/ ಸಹೋದರ/ಸಹೋದರಿ/ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

ಕ್ಷೇಮ ಶ್ರೀ **10 ನೇ ಜನವರಿ 2018**

ತೀರ್ಥರೂಪರವರಿಗೆ,
ನಿಮ್ಮ ಮಗಳಾದ ಪ್ರಕೃತಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.

ನಾನು ಆರೋಗ್ಯದಿಂದ ಇದ್ದೇನೆ. ನೀವೂ ಆರೋಗ್ಯದಿಂದ ಇದ್ದೀರಿ ಎಂದು ಭಾವಿಸುತ್ತೇನೆ. ನಾನು ತಿಳಿಸುವುದೇನೆಂದರೆ ಮಾರ್ಚ್ 2022 ರಲ್ಲಿ ಜರುಗುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಾಕಷ್ಟು ಅಭ್ಯಾಸ ಮಾಡಿ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಶಿಕ್ಷಕರು ನೂತನ ಪರೀಕ್ಷಾ ಪದ್ಧತಿ ಕುರಿತು ಮಾಹಿತಿಯನ್ನು ಒದಗಿಸುತ್ತಿದ್ದಾರೆ. ಈ ಪರೀಕ್ಷೆಯಲ್ಲಿ ಶೇ.99 ಅಂಕಗಳನ್ನು ಗಳಿಸಲು ಸಾಕಷ್ಟು ಶ್ರಮದ ಜೊತೆಗೆ ನಿಶ್ಚಿತ ಗುರಿಯನ್ನು ಇಟ್ಟುಕೊಂಡಿದ್ದೇನೆ. ಈಗಾಗಲೇ 4 ರೂಪಣಾತ್ಮಕ ಪರೀಕ್ಷೆ ಮುಗಿದಿದ್ದು, ಅದರಲ್ಲಿ ಉತ್ತಮ ಅಂಕಗಳನ್ನು ಗಳಿಸಿದ್ದೇನೆ, ನಿಮ್ಮೆಲ್ಲರ ಆಶೀರ್ವಾದ ಮತ್ತು ಗುರುಗಳ ಆಶೀರ್ವಾದ ನನ್ನ ಮೇಲೆ ಇರಲಿ. ಹಾಗೆಯೇ ಮಾತೃಶ್ರೀಯವರಿಗೆ ಅನಂತ ನಮಸ್ಕಾರಗಳನ್ನು ತಿಳಿಸಿ. ಈ ಪತ್ರ ಮುಟ್ಟಿದ ಕೂಡಲೇ ತಮ್ಮ ಕ್ಷೇಮ ಸಮಾಚಾರ ಕುರಿತು ಪತ್ರವನ್ನು ಬರೆಯಿರಿ.

ನಮಸ್ಕಾರಗಳೊಂದಿಗೆ, ಇತಿ ತಮ್ಮ ಪ್ರೀತಿಯ ಮಗಳು

ಹೊರ ವಿಳಾಸ :

ರವರಿಗೆ,
ಸಿಫಾಯಿ ರಾಮಣ್ಣ
ನಿಸರ್ಗ ನಿಲಯ : ಮನೆ ನಂ : 504/ಎ
ಅಲಂಕಾರ ಬೀದಿ, ಕುವೆಂಪು ನಗರ, ಕೋಲಾರ

## ವ್ಯವಹಾರಿಕ ಪತ್ರ ಬರವಣಿಗೆ

ವರ್ಗಾವಣೆ ಪತ್ರ / ಅಂಕಪಟ್ಟಿ ನೀಡಲು ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ.

ರವರಿಂದ,
ಸಮೀಕ್ಷಾ ರಾಣಿ. ದಿನಾಂಕ : 10 –01–2022
10 ನೇ ತರಗತಿ
ಸರಕಾರಿ ಪ್ರೌಢಶಾಲೆ ಬಿದರಹಳ್ಳಿ
ತಾ : ಬೆಂಗಳೂರು ಪೂರ್ವ
ಜಿ : ಬೆಂಗಳೂರು ಗ್ರಾಮಾಂತರ

ರವರಿಗೆ,
ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢಶಾಲೆ ಬಿದರಹಳ್ಳಿ
ತಾ : ಬೆಂಗಳೂರು ಪೂರ್ವ
ಜಿ : ಬೆಂಗಳೂರು ಗ್ರಾಮಾಂತರ

ಅಭಿನಿಡೇಶಕರ ಕಛೇರಿ ಕೋಲಾರ

ಮಾನ್ಯರೇ,

ವಿಷಯ : ವರ್ಗಾವಣೆ ಪ್ರಮಾಣ ಪತ್ರ ನೀಡುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ–ನಾನು ತಮ್ಮ ಶಾಲೆಯಲ್ಲಿ 2020–21 ನೇ ಶೈಕ್ಷಣಿಕ ವರ್ಷದಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡಿ, ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದೇನೆ. ನನ್ನ ಮುಂದಿನ ವ್ಯಾಸಂಗಕ್ಕಾಗಿ ವರ್ಗಾವಣೆ ಪ್ರಮಾಣ ಪತ್ರ ಅವಶ್ಯಕತೆಯಿದ್ದು, ಅದನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಇತಿ ತಮ್ಮ ವಿಧೇಯ ವಿದ್ಯಾರ್ಥಿನಿ

ಹೊರ ವಿಳಾಸ :

ರವರಿಗೆ,
ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢಶಾಲೆ ಬಿದರಹಳ್ಳಿ
ತಾ : ಬೆಂಗಳೂರು ಪೂರ್ವ
ಜಿ : ಬೆಂಗಳೂರು ಗ್ರಾಮಾಂತರ

ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ರವರಿಂದ :
ಸ್ಫೂರ್ತಿ ದೇವಾಡಿಗ
ತಂದೆ : ಹಾಲೇಶ್ ದೇವಾಡಿಗ
ಮನೆ ನಂ : 5643, ನವಮಿ ರಸ್ತೆ
ಗ್ರಾಮ : ದೇವರಹಳ್ಳಿ
ತಾ : ಸಾಗರ
ಜಿ : ಶಿವಮೊಗ್ಗ

ದಿನಾಂಕ : 10.1.2022

ರವರಿಗೆ :
ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿ ಡಿ ಒ)
ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಹಳ್ಳಿ
ತಾ : ಸಾಗರ
ಜಿ : ಶಿವಮೊಗ್ಗ

ಮಾನ್ಯರೇ,

ವಿಷಯ : ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವಂತೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾನು ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ದೇವರಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ಇಲ್ಲಿ ಬಹುದಿನಗಳಿಂದ ಕುಡಿಯುವ ನೀರಿನ ಪೂರೈಕೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಇದರಿಂದ ಇಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಕಾರಣ ಈ ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ಸರಿಪಡಿಸುವಂತೆ ತಮ್ಮಲ್ಲಿ ನಮ್ಮ ಊರಿನ ನಾಗರಿಕರ ಪರವಾಗಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಇತಿ ತಮ್ಮ ವಿಶ್ವಾಸಿ

ಹೊರ ವಿಳಾಸ :

ರವರಿಗೆ :
ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿ ಡಿ ಒ)
ಗ್ರಾಮ ಪಂಚಾಯಿತಿ ಕಾರ್ಯಾಲಯ, ದೇವರಹಳ್ಳಿ
ತಾ : ಸಾಗರ
ಜಿ : ಶಿವಮೊಗ್ಗ

**ಅಭ್ಯಾಸಕ್ಕಾಗಿ :**

ನಿಮ್ಮನ್ನು ಶ್ರೀನಿವಾಸಪುರ ಸರ್ಕಾರಿ ಪ್ರೌಢಶಾಲೆಯ ನಾಗಕಿಶೋರ್/ನಾಗಿಣಿ ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆಯುವ ಮಾತೆಯರ ಸಭೆಯಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿ ಚಿಕ್ಕಮಂಗಳೂರಿನಲ್ಲಿ ವಾಸವಿರುವ "ಗಾಯತ್ರಿ" ಎಂಬ ಹೆಸರಿನ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಶಿಡ್ಲಘಟ್ಟ ಶಾಲೆಯ 'ಕೀರ್ತಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ "ಸ್ವಾತಂತ್ರ್ಯ ದಿನಾಚರಣೆ" ಸಮಾರಂಭವನ್ನು ಕುರಿತು ಹಾವೇರಿಯಲ್ಲಿರುವ ನಿಮ್ಮ ಮಿತ್ರನಾದ "ಸಂಜಯ್" ಎಂಬ ಗೆಳೆಯನಿಗೆ ಒಂದು ಪತ್ರ ಬರೆಯಿರಿ.

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಕೆ.ಜಿ.ಎಫ್ ಶಾಲೆಯ "ಮೂರ್ತಿ" ಎಂದು ಭಾವಿಸಿಕೊಂಡು ವಾರ್ಷಿಕ ಪರೀಕ್ಷೆಯ ಪೂರ್ಣ ತಯಾರಿಯನ್ನು ಕುರಿತು ಬೆಳಗಾವಿಯ ಎನ್. ಆರ್. ಬಡಾವಣೆಯಲ್ಲಿ ವಾಸವಾಗಿರುವ "ಶ್ರೀರಂಗಪ್ಪ" ಎಂಬ ನಿಮ್ಮ ಚಿಕ್ಕಪ್ಪ ನವರಿಗೆ ಒಂದು ಪತ್ರ ಬರೆಯಿರಿ.

## ಪ್ರಬಂಧಗಳು

### 1. ಸ್ವಚ್ಛ ಭಾರತ್ ಅಭಿಯಾನ

**ಪೀಠಿಕೆ:** ಸ್ವಚ್ಛ ಎಂದರೆ ನಿರ್ಮಲವಾದದ್ದು, ಪರಿಶುದ್ಧವಾದದ್ದು ಎಂದರ್ಥ. ಸ್ವಚ್ಛಭಾರತ ಎಂದರೆ ಭಾರತ ದೇಶದ ಕಲುಷಿತ ಸ್ಥಳಗಳನ್ನು ನಿರ್ಮಲಗೊಳಿಸುವುದು ಎಂದರ್ಥ. ಸ್ವಚ್ಛ ಭಾರತ್ ಅಭಿಯಾನವು ಭಾರತ ದೇಶದ ಒಂದು ಅತ್ಯುತ್ತಮ ನೈರ್ಮಲ್ಯ ಯೋಜನೆ ಆಗಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದ್ದು. ಭಾರತ ದೇಶವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಅತ್ಯಂತ ಮಹತ್ವಪೂರ್ಣ ಅಭಿಯಾನವಾಗಲಿದೆ.

**ವಿಷಯ ನಿರೂಪಣೆ :** 'ಆರೋಗ್ಯವೇ ಮಹಾಭಾಗ್ಯ' 'ಎಲ್ಲಿದೆಯೋ ಸ್ವಚ್ಛತೆ ಅಲ್ಲಿದೆ ಆರೋಗ್ಯ' ಎಂಬ ಹಿತನುಡಿಗಳಂತೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳು ಸ್ವಚ್ಛವಾಗಿದ್ದರೆ ಅದು ನಮಗೆ ಆರೋಗ್ಯ ಭಾಗ್ಯವನ್ನು ತಂದು ಕೊಡುತ್ತದೆ. ಇಲ್ಲವಾದರೆ ಅನಾರೋಗ್ಯ ಉಂಟಾಗಿ ಕಾಯಿಲೆಗಳು ಉಲ್ಬಣಿಸಬಹುದು. ಆದ್ದರಿಂದ ನಾವು ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ನೈರ್ಮಲ್ಯದಿಂದ ಇರುವಂತೆ ನೋಡಿಕೊಳ್ಳಬೇಕು. ಭಾರತ ದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಉದ್ದೇಶದಿಂದ ದಿನಾಂಕ: 02.10.2014 ರಂದು ನಮ್ಮ ದೇಶದ ಪ್ರಧಾನ ಮಂತ್ರಿಯಾದ ಶ್ರೀ ನರೇಂದ್ರ ಮೋದಿಯವರು ಸ್ವತಃ ತಾವೇ ಭಾಗವಹಿಸುವುದರ ಮೂಲಕ ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದರು. ಮಹಾತ್ಮ ಗಾಂಧೀಜಿಯವರ ಹುಟ್ಟಿದ ದಿನ (ಅಕ್ಟೋಬರ್–2) ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಗಾಂಧೀಜಿಯವರ ನಿರ್ಮಲ ಭಾರತ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಅತ್ಯತ್ತಮ ಅಭಿಯಾನವಾಗಿದೆ. ಕೇಂದ್ರ, ರಾಜ್ಯ ಸರ್ಕಾರಿ ನೌಕರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ರಾಜಕೀಯ ಮುಖಂಡರು, ಇತ್ಯಾದಿ ಭಾರತದ ನಾಗರಿಕರು ಪ್ರತಿಜ್ಞೆ ಕೈಗೊಳ್ಳುವ ಮೂಲಕ ಈ ಅಭಿಯಾನಕ್ಕೆ ಕೈಜೋಡಿಸಿದ್ದಾರೆ.

'ಸ್ವಚ್ಛತೆ ಉತ್ತಮ ಆರೋಗ್ಯದ ತಳಹದಿ' ಆದ್ದರಿಂದ ಸ್ವಚ್ಛತೆಯಿಂದ ಕೂಡಿದ ಸ್ಥಳ ನೋಡಲು ಸುಂದರವಾಗಿರುವಂತೆ ರೋಗಮುಕ್ತವು ಆಗಿರುತ್ತದೆ. ಆದ್ದರಿಂದ ನಾವು ಮೊದಲು ನಮ್ಮ ಮನೆ, ಬೀದಿ, ಗ್ರಾಮ, ಶಾಲಾ–ಕಾಲೇಜುಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಈ ಅಭಿಯಾನಕ್ಕೆ ಪ್ರೋತ್ಸಹ ನೀಡಿದಂತೆ ಆಗುತ್ತದೆ. ನಾವುಗಳು ಪ್ರತಿನಿತ್ಯ ಸ್ವಲ್ಪ ಸಮಯವನ್ನಾದರೂ ಸ್ವಚ್ಛತೆಗೆ ಮೀಸಲಿಟ್ಟು, ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆರೋಗ್ಯದಿಂದ ಇರೋಣ.

**ಉಪಸಂಹಾರ : "ಏಕ್ ಕದಂ ಸ್ವಚ್ಛತಾ ಕಿ ಔರ್"** ಎಂಬ ಧ್ಯೇಯ ವಾಕ್ಯವನ್ನಿಟ್ಟುಕೊಂಡು ನಾವೆಲ್ಲರೂ ನಿರ್ಮಲ ಮನಸ್ಸಿನಿಂದ ನಮ್ಮ ದೇಶವನ್ನು ನೈರ್ಮಲ್ಯಗೊಳಿಸಿಕೊಳ್ಳಬೇಕು. ಈ ಅಭಿಯಾನದಲ್ಲಿ ಭಾಗವಹಿಸಿ, ಪ್ರೊತ್ಸಾಹಿಸಿ ಸ್ವಚ್ಛ, ಸುಂದರ ಪರಿಸರದಿಂದ ಕೂಡಿದ ಭಾರತವನ್ನು ನಿರ್ಮಿಸಿ ಗಾಂಧೀಜಿಯವರ ಕನಸನ್ನು ನನಸು ಮಾಡೋಣ ಎಂಬ ಆಶಯ ನಮ್ಮದಾಗಿರಲಿ

### 2. ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಮಹತ್ವ

**ಪೀಠಿಕೆ :** ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. ಇಡೀ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧ ಭಾವವಿಲ್ಲದೆ. ಜಾತಿ. ಧಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು ಎಂದು ಕರೆಯಬಹುದು. ನಮ್ಮ ದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ 1) ಸ್ವಾತಂತ್ರ್ಯ ದಿನಾಚರಣೆ 2) ಗಣರಾಜ್ಯೋತ್ಸವ 3) ಗಾಂಧಿ ಜಯಂತಿ.

**ವಿಷಯ ವಿವರಣೆ** : **1) ಸ್ವಾತಂತ್ರ್ಯ ದಿನಾಚರಣೆ :** ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರೀಟೀಷರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಪಾರದ ಉದ್ದೇಶದಿಂದ ಬಂದ ಬ್ರೀಟಿಷರು ಭಾರತೀಯ ಅರಸರುಗಳ ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು. ಭಾರತೀಯರಿಗೆ ಸ್ವಾತಂತ್ರ ಎನ್ನುವುದೇ ಇರಲಿಲ್ಲ. ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರೀಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ 1947 ನೇ ಆಗಸ್ಟ್ 15 ರಂದು ಸ್ವಾತಂತ್ರವನ್ನು ಪಡೆದರು. ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ. ಅಂದು ಶಾಲಾ-ಕಾಲೇಜು-ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**2) ಗಣರಾಜ್ಯೋತ್ಸವ:** ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಆಡಳಿತದ ರೂಪುರೇಷಗಳನ್ನು ಸಿದ್ಧಪಡಿಸಲಾಗುತ್ತದೆ. ಆ ರೂಪುರೇಷುಗಳನ್ನು ಒಳಗೊಂಡಿರುವುದೇ ನಮ್ಮ ಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು ಜಾರಿಗೆ ತಂದ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ. ಈ ದಿನದಲ್ಲಿ ರಾಷ್ಟ್ರಧ್ವಜವನ್ನು ಆರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳಸಿಕೊಳ್ಳುವ ಆಶಯವನ್ನು ಪಡೆಯುತ್ತಾರೆ. ಹಾಗೇಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**3) ಗಾಂಧಿ ಜಯಂತಿ:** ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು "ನಾಯಕರಿಲ್ಲದ ನಾವೆ ದಡಸೇರಲಾರದು" ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ಬಹುಮುಖ್ಯ ನಾಯಕತ್ವವಹಿಸಿಕೊಂಡವರು, ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ ಅಕ್ಟೋಬರ್ 2. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ಏಕೆಂದರೆ ಗಾಂಧೀಜಿವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ, ಅವರನ್ನು ಸ್ಮರಿಸುತ್ತಾ ಸ್ವಾತತ್ರ್ಯದ ಮಹತ್ವದ ಬಗ್ಗೆ ಕೊಂಡಾಡುವ ದಿನವಾಗಿದೆ.

**ಉಪಸಂಹಾರ:** ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

**3. ಗ್ರಂಥಾಲಯಗಳ ಮಹತ್ವ**

**ಪೀಠಿಕೆ:** "ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" ಎಂಬ ನಾಣ್ಣುಡಿಯಂತೆ ಪ್ರತಿಯೊಬ್ಬರು ಗ್ರಂಥಗಳನ್ನು ಹೊಂದಿ ತಮ್ಮಲ್ಲಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳಿರುವ ಆಲಯವೇ ಗ್ರಂಥಾಲಯ. ಅದಕ್ಕೆಂದೆ ಶಾಲಾ-ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

**ವಿಷಯ ವಿವರಣೆ:** ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರವಹಿಸುತ್ತವೆ. ಮನುಷ್ಯನ ದೇಹಕ್ಕೆ ಅನ್ನ. ನೀರು. ಗಾಳಿ ಹೇಗೆ ಮುಖ್ಯವೋ, ಹಾಗೆ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರರಿದ್ದಂತೆ. ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯೂ ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯಗಳ ಅಂದರೆ ಸಾಹಿತ್ಯ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಹಲವಾರು ಭಾಷೆಯ ಪುಸ್ತಕಗಳು ಸಹ ಇರುತ್ತವೆ. ಗ್ರಂಥಾಲಯಗಳ ಜ್ಞಾನದ ನಿಧಿಗಳಿದ್ದಂತೆ ಅಂತಹ ಜ್ಞಾನ ನಿಧಿಗೆ ಕೈಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಗ್ರಂಥಾಲಗಳು ಜ್ಞಾನಾರ್ಜನೆಯ ಮೆಟ್ಟಿಲಿಗಳು ಅವುಗಳಲ್ಲಿಗೆ ಹೋಗಿ ನಮ್ಮ ಜ್ಞಾನದಹಾದಿ ತುಳಿಯಬೇಕು. ಪುಸ್ತಕಗಳಿಲ್ಲದ ಮನೆ ಗ್ರಂಥ ಭಂಡಾರವಿಲ್ಲದ ಶಾಲಾ ಕಾಲೇಜುಗಳು ದೇವರಿಲ್ಲದ ಗುಡಿಯಂತೆ. ಆದ್ದರಿಂದ ದೇವಾಲಯಗಳಂತೆ ಇರಲಿ ಎಂದು ನಮ್ಮ ಶಾಲಾ-ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ಮೊದಲಿನಿಂದಲೂ ತೆರಯಲಾಗಿದೆ. ಓದುವ ಹವ್ಯಾಸವುಳ್ಳವರು ಗ್ರಂಥಾಯಲಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಬಹುದು ಅದಕ್ಕೆಂದೆ ಇ-library (ಈ-ಗ್ರಂಥಾಲಯ)ಗಳನ್ನು ತೆರಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

**ಉಪಸಂಹಾರ:** ಒಟ್ಟಾರೆಯಾಗಿ ಶಾಲಾ-ಕಾಲೇಜುಗಳಲ್ಲಿನ ಮತ್ತು ಸಾರ್ವಜನಿಕ ಗ್ರಂಥಾಲಯಗಳು ನಮ್ಮ ಜ್ಞಾನ ವಿಕಾಸಕ್ಕೆ ಅವಶ್ಯವಾದ ಮಾಹಿತಿಯನ್ನು ಒದಗಿಸಿ, ಜ್ಞಾನವಂತರಾಗಲು ಸಹಾಯವಾಗುತ್ತವೆ. ಸಜ್ಜನರ ಸಂಘ ಮಾಡಿದಂತೆ. ಸಭ್ಯ ಗ್ರಂಥಗಳ ಅಧ್ಯಯನಮಾಡಿ ಜ್ಞಾನ ಸಾಗರವನ್ನು ಈಜಿ ದಡ ಸೇರಬಹುದು. ಗ್ರಂಥಾಲಯಗಳು ಜ್ಞಾನ ವಿಕಾಸದ ಗುರುವಿದ್ದಂತೆ ಎಂದು ಗುರುವಿನ ಬಳಿ ತೆರಳಿ ಅಭ್ಯಾಸ ಮಾಡುವ ಹವ್ಯಾಸ ನಮ್ಮದಾಗಬೇಕು.

**4. ಮಹಾಮಾರಿ ಕೊರೋನಾ (ಕೋವಿಡ್–19)**

**ಪೀಠಿಕೆ :** ವಿಶ್ವದಲ್ಲೇ ಮೊದಲ ಭಾರಿಗೆ ಕ್ರಿ.ಶ 2019 ರ ಡಿಸೆಂಬರ್‌ನಲ್ಲಿ ಚೀನಾ ದೇಶದ ಹುಹಾನ್ ನಗರದಲ್ಲಿ ಮಹಾಮಾರಿ 'ಕೊರೋನಾ' ಎನ್ನುವ ಸೋಂಕು ರೋಗ ಪತ್ತೆಯಾಗಿ ಇಡೀ ವಿಶ್ವವನ್ನೇ ತಲ್ಲಣಗೊಳಿಸಿತು, ಪ್ರಪಂಚದಾದ್ಯಂತ ಕೋಟ್ಯಾಂತರ ಜನರು ಮಹಾಮಾರಿ ಕೊರೋನಾ ಸಾಂಕ್ರಾಮಿಕ ರೋಗದಿಂದ ಬಳಲಿದರು, ಲಕ್ಷಾಂತರ ಜನರು ದುರ್ಮರಣಕ್ಕೆ ಈಡಾದರು. ಪ್ರಪಂಚದ ಎಲ್ಲಾ ದೇಶಗಳು ಜನರನ್ನು ಕೊರೋನಾದಿಂದ ರಕ್ಷಿಸಲು 'ಲಾಕ್‌ಡೌನ್' ಘೋಷಣೆ ಮಾಡಿದವು. ಇದರಿಂದ ಕೋಟ್ಯಾಂತರ ಜನರು ಉದ್ಯೋಗ ಕಳೆದುಕೊಂಡರು ಉದ್ಯಮಗಳು ನಷ್ಟದಿಂದ ಮುಚ್ಚಲ್ಪಟ್ಟವು. ಎಲ್ಲ ದೇಶಗಳ ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿತು. ಇದರಿಂದಾಗಿ ಜಗತ್ತಿನ ಇತಿಹಾಸದಲ್ಲಿ ಕ್ರಿ.ಶ. 2020ನೇಯ ಇಸವಿ ಒಂದು ಕರಾಳವರ್ಷ ಎಂದು ಕರೆಸಿಕೊಂಡಿತು.

**ವಿಷಯ ನಿರೂಪಣೆ** : ಕೊರೋನಾ ಎನ್ನುವುದು ವೈರಸ್ಸಿನಿಂದ ಬರುವ ಒಂದು ಸೋಂಕು ರೋಗ, ಈ ವೈರಸ್ ನಲ್ಲಿ ಕಿರೀಟದಲ್ಲಿ ಇರುವಂತಹ ಮುಳ್ಳುಗಳಂತಹ ರಚನೆಗಳು ಇರುವುದರಿಂದ ಕೊರೋನಾ ಎನ್ನುವ ಹೆಸರು ಬಂದಿದೆ. ಕೊರೋನಾ ಎಂದರೆ ಲ್ಯಾಟಿನ್ ಭಾಷೆಯಲ್ಲಿ ಕೀರಿಟ ಎಂಬ ಅರ್ಥ, ವಿಶ್ವ ಆರೋಗ್ಯ ಸಂಸ್ಥೆಯು ಹೇಳುವಂತೆ ಇದು ಪ್ರಮುಖವಾಗಿ ಉಸಿರಾಟದ ಮೂಲಕ ಹರಡುತ್ತದೆ. ಈ ಸೋಂಕು ಇರುವ ರೋಗಿ ಕೆಮ್ಮಿದಾಗ ಅಥವಾ ಸೀನಿದಾಗ ಹೊರ ಚೆಲ್ಲುವ ಹನಿಗಳ ಮೂಲಕ ಹರಡುತ್ತದೆ. ಈ ಹನಿಗಳು ನೆಲದ ಮೇಲೋ ಇನ್ನಾವುದರ ವಸ್ತುವಿನ ಮೇಲೋ ಬಿದ್ದಿರುತ್ತದೆ. ಅಂತಹ ವಸ್ತುವನ್ನು ಮುಟ್ಟಿದ ಕೈಯಿಂದಲೇ ನಾವು ಮೂಗು, ಕಣ್ಣು, ಬಾಯಿಯನ್ನು ಮುಟ್ಟಿದಾಗ ಇದು ನಮಗೂ ಹರಡುತ್ತದೆ. ಈ ಕೊರೋನಾ ವೈರಸ್ ಬಾವಲಿಗಳಿಂದ ಬಂದಿರಬೇಕು ಎಂದು ನಂಬಲಾಗಿದೆ. ಹಲವು ಕಾರಣಗಳಿಂದ ಕೊರೊನಾದ ಬಗ್ಗೆ ನಾವು ಕಾಳಜಿ ವಹಿಸಬೇಕು. ಮೊದಲನೆಯದಾಗಿ ಇದು ಒಬ್ಬರಿಂದ ಮತ್ತೊಬ್ಬ ವ್ಯಕ್ತಿಗೆ ಸುಲಭವಾಗಿ ಹರಡುವ ಸೋಂಕು. ಜೊತೆಗೆ ಇದು ಉಸಿರಾಟದ ತೊಂದರೆಯನ್ನು ಉಂಟುಮಾಡುತ್ತದೆ. ಎರಡನೆಯದಾಗಿ ಸೋಂಕು ತಗುಲಿದ ಕೆಲವರಿಗೆ ಇದು ಮಾರಕವಾಗಿದೆ. ಮೂರನೆಯದಾಗಿ ನಮ್ಮ ದೇಹಕ್ಕೆ ಇದನ್ನು ತಡೆಯುವ ಸಹಜ ಸಾಮಾರ್ಥ್ಯ ಇಲ್ಲ. ಇದನ್ನು ತಡೆಯಬಲ್ಲ ಲಸಿಕೆಗಳು ಇಲ್ಲ ಮತ್ತು ಸದ್ಯಕ್ಕೆ ಅದನ್ನು ಗುಣಪಡಿಸುವ ಔಷಧಿಗಳು ಇಲ್ಲ. ಸೋಂಕು ತಗುಲಿದ ಬಹುತೇಕ ಜನರಿಗೆ ಫ್ಲೂ ಬಂದಾಗ ಕಾಣುವಂತಹ. ಲಕ್ಷಣಗಳೇ ಇರುತ್ತವೆ. ಏರು ಜ್ವರ. ಒಣಕೆಮ್ಮು. ಮತ್ತು ಸುಸ್ತು ಸಾಮಾನ್ಯ. ಕೆಲವರಿಗೆ ಮೈಕೈ ನೋವು ಉಸಿರಾಟದ ತೊಂದರೆ, ಸ್ನಾಯುಗಳು ಹಾಗೂ ಸಂದಿಗಳ ನೋವು, ಗಂಟಲು ನೋವು, ತಲೆನೋವು ಚಳಿ ಮತ್ತು ಒಮ್ಮೊಮ್ಮೆ ಭೇದಿ ಕೂಡ ಕಾಣಿಸಬಹುದು. ಈ ಖಾಯಿಲೆ ಮಕ್ಕಳು ಯುವಕರಿಗಿಂತಲೂ ವಯಸ್ಸಾದವರನ್ನು ಹೆಚ್ಚು ಬಾದಿಸುವಂತೆ ತೋರುತ್ತದೆ. ಆದರೆ ಸಕ್ಕರೆ ರೋಗ, ಹೃದಯ ತೊಂದರೆಗಳು, ಶ್ವಾಸಕೋಶದ ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಇರುವಂತಹವರಲ್ಲಿ ಇದರ ಪರಿಣಾಮ ಹೆಚ್ಚು ಬೀರುತ್ತದೆ. ಸರ್ಕಾರವು ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ನಿರ್ದೇಶನಗಳನ್ನು ಪಾಲಿಸುತ್ತಿದ್ದು, ಆರೋಗ್ಯ ಸೇವೆಗಳ ಪ್ರತಿಯೊಂದು ಸ್ತರವನ್ನು ಈ ಗುರಿಯತ್ತ ನಿರ್ದೇಶಿಸಿದೆ. ಸೋಂಕಿನ ಸಂಖ್ಯೆಯನ್ನು ಪ್ರತಿದಿನವೂ ಗಣಿಸುವ ಆರೋಗ್ಯ ಮಂತ್ರಾಲಯವು. ವೈದ್ಯರಗಳು ಹಾಗೂ ಆಸ್ಪತ್ರೆಗಳಿವೆ. ರೋಗಿಗಳನ್ನು ಪ್ರತ್ಯೇಕಿಸಿಟ್ಟು, ಚಿಕಿತ್ಸೆ ನೀಡುವ ಬಗ್ಗೆ ಸೂಚನೆಗಳನ್ನು ನೀಡುತ್ತದೆ. ಈ ಸೋಂಕು ತಗಲಿರುವ ದೇಶಗಳ ಜನರು ನಮ್ಮ ದೇಶವನ್ನು ಪ್ರವೇಶಿಸಿದಂತೆ ಅವರ ವೀಸಾಗಳನ್ನು ರದ್ದುಪಡಿಸಲಾಗಿದೆ. ಸೋಂಕು ಇರಬಹುದು ಎಂಬ ಸಂದೇಹದಿಂದ ಅವರನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ.

**ಉಪಸಂಹಾರ :** ನೀರು ಮತ್ತು ಸಾಬೂನು ಇಲ್ಲದಿದ್ದರೆ ಮದ್ಯಪಾನ ಬೆರತ ಸ್ಯಾನಿಟೈಸರ್ ಬಳಸಿ, ನಮ್ಮ ಕೈಯನ್ನು ಚೆನ್ನಾಗಿ ಆಗ ಆಗ ತೊಳೆದುಕೊಳ್ಳಬೇಕು. ನಮ್ಮ ಕೈಯಿಂದ ಮುಖವನ್ನು ಮುಟ್ಟುವುದು ಅದಷ್ಟು ತಡೆಯುವುದು ಒಳ್ಳೆಯದು. ಜನಜಂಗುಳಿ ಇರುವ ಕಡೆ ಹೋಗುವುದನ್ನು ಕಡಿಮೆ ಮಾಡಬೇಕು. ಸಾಮಾಜಿಕ ಅಂತರ ಕಾಯಬೇಕು. 3 ರಿಂದ 6 ಅಡಿ ದೂರ ಇರುವುದು ಸುರಕ್ಷಿತ. ಕೈ ಕುಲುಕುವುದುನ್ನು ನಿಲ್ಲಿಸಿ ದೂರದಿಂದ ನಮಸ್ಕರಿಸುವುದು ಉತ್ತಮ. ಮಾಸ್ಕ್ ಧರಿಸುವುದರಿಂದ ನಮ್ಮನ್ನು ರಕ್ಷಿಸುವುದಕ್ಕಿಂತ ಬೇರೆಯವರಿಗೆ ನಮ್ಮಿಂದ ಸೋಂಕು ಹರಡುವುದನ್ನು ತಡೆಯುತ್ತದೆ. ನಮಗೆ ಉಸಿರಾಟದ ತೊಂದರೆ ನೆಗಡಿ ಇದೆ ಎಂದೇನಾದರೂ ಅನುಮಾನವಿದ್ದರೆ ಖಂಡಿತ ಮಾಸ್ಕ್ ಬಳಸಬೇಕು, ಹಣ್ಣು–ತರಕಾರಿ, ಸೊಪ್ಪು ತಿಂದು ರೋಗನಿರೋಧಕ ಶಕ್ಕಿ ಹೆಚ್ಚಿಸಿಕೊಳ್ಳಬೇಕು. ಇದರ ಬಗ್ಗೆ ಜಾಗೃತಿ ಮೂಢಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**ಶುಭವಾಗಲಿ**